ಸಂಪುಟ 01 | ಸಂಚಿಕೆ 174 | ಸೋಮವಾರ 25 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ಥೈರಾಯ್ಡ್ ದಿನ (World Thyroid Day)

ಈ ದಿನವನ್ನು ಥೈರಾಯ್ಡ್ ಸಂಬಂಧಿತ ರೋಗಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಆಚರಿಸಲಾಗುತ್ತದೆ. ಥೈರಾಯ್ಡ್ ಗ್ರಂಥಿಯ ಆರೋಗ್ಯ, ಅದರ ಸಮಸ್ಯೆಗಳು ಹಾಗೂ ಚಿಕಿತ್ಸೆ ಕುರಿತು ಅರಿವು ಹೆಚ್ಚಿಸುವುದು ಇದರ ಉದ್ದೇಶ.

2) ಅಂತಾರಾಷ್ಟ್ರೀಯ ಕಣ್ಮರೆಯಾದ ಮಕ್ಕಳ ದಿನ (International Missing Children's Day)

ಕಾಣೆಯಾದ ಮಕ್ಕಳ ಸುರಕ್ಷತೆ ಮತ್ತು ಅವರನ್ನು ಹುಡುಕುವ ಕಾರ್ಯಗಳ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

## ಸುಭಾಷಿತ

ಬದುಕಿನಲ್ಲಿ ಪರಮಾವಧಿಯ ತೃಪ್ತಿಯನ್ನು ಕೊಡಬಲ್ಲದು ಒಂದೇ ಒಂದು, ತಾನು ಸರಿಯಾಗಿ ನಡೆದಿದ್ದೇನೆ ಎಂಬ ಆತ್ಮವಿಶ್ವಾಸ.

– ಶಿವರಾಮ ಕಾರಂತ

## ರಸಗೊಬ್ಬರ ಸಮರ್ಪಕ ವಿತರಣೆಗೆ ಜಿಲ್ಲಾಧಿಕಾರಿ ಕಟ್ಟುನಿಟ್ಟಿನ ನಿರ್ದೇಶನ

◆ ನೈಜ್ಯ ದೆಸೆ ನ್ಯೂಸ್




ಕೊಪ್ಪಳ : ರೈತರಿಗೆ ಅನುಕೂಲವಾಗುವಂತೆ ಜಿಲ್ಲೆಯಲ್ಲಿ ರಸಗೊಬ್ಬರ ವಿತರಣೆ ಪ್ರಕ್ರಿಯೆಯನ್ನು ಕೂಡಲೇ ಆರಂಭಿಸಿ, ಅಚ್ಚುಕಟ್ಟಾಗಿ ನಿರ್ವಹಣೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ ಇಟ್ನಾಳ ಅವರು ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ವಿತರಕರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಇತ್ತೀಚೆಗೆ ಸಭೆ ನಡೆಸಿದ ಅವರು ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಮಳೆಗಳು ವಾಡಿಕೆಗಿಂತ ಮುನ್ನವೇ ಆರಂಭವಾಗಿವೆ. ಆದ್ದರಿಂದ ನೀರಾವರಿ ಆಶ್ರಿತ ರೈತರು ಸೇರಿದಂತೆ ಬಿತ್ತನೆ ಕಾರ್ಯ ಆರಂಭಿಸುವ ಎಲ್ಲ ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಕ್ರಮ ವಹಿಸಬೇಕು ಎಂದು ಹೇಳಿದರು. 2026-27ನೇ ಸಾಲಿನ ಮುಂಗಾರು ಹಂಗಾಮಿನ ಅವಧಿ ಏಪ್ರಿಲ್‌ನಿಂದ ಸೆಪ್ಟೆಂಬರ್ ತನಕದಲ್ಲಿ ಯೂರಿಯಾ ರಸಗೊಬ್ಬರಕ್ಕೆ 49,451 ಮೆಟ್ರಿಕ್ ಟನ್, ಡಿಎಪಿಗೆ 17,817 ಮೆಟ್ರಿಕ್ ಟನ್, ಎಂಒಪಿಗೆ 5758 ಮೆಟ್ರಿಕ್ ಟನ್, ಕಾಂಪ್ಲೆಕ್ಸ್‌ಗೆ 43,446 ಮೆಟ್ರಿಕ್ ಟನ್ ಮತ್ತು ಎಸ್‌ಎಸ್‌ಪಿಗೆ 1231 ಮೆಟ್ರಿಕ್ ಟನ್ ಬೇಡಿಕೆ ಇದೆ ಎಂದು ತಿಳಿಸಿದರು.

## ಬೆಂಗಳೂರಿನ ಬೃಹತ್ ಯೋಜನೆಯಿಂದ ತಮಿಳುನಾಡಿಗೆ ಲಾಭ:

# ಡಿ.ಕೆ ಶಿವಕುಮಾರ್ ನಿರ್ಧಾರಕ್ಕೆ ಕನ್ನಡಿಗರ ಆಕ್ರೋಶ

◆ ನೈಜ್ಯ ದೆಸೆ ನ್ಯೂಸ್



ಬೆಂಗಳೂರು : ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ ಶಿವಕುಮಾರ್ ಅವರ ಪ್ರಮುಖ ನಿರ್ಧಾರಕ್ಕೆ ಕನ್ನಡಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಡಿ.ಕೆ ಶಿವಕುಮಾರ್ ಅವರ ಹೊಸ ನಿರ್ಧಾರದಿಂದ ಬೆಂಗಳೂರು ಹಾಗೂ ಕರ್ನಾಟಕಕ್ಕೆ ಲಾಭವಾಗುವುದಕ್ಕಿಂತಲೂ ಇದರಿಂದ ತಮಿಳುನಾಡಿಗೇ ಹೆಚ್ಚು ಲಾಭ ಎಂದು ಕನ್ನಡಿಗರು ಆಕ್ರೋಶ ಹೊರ ಹಾಕಿದ್ದಾರೆ.ನಮ್ಮ ಬೆಂಗಳೂರಿನಲ್ಲಿ ದೇಶದ 2ನೇ ಅತಿ-ದೊಡ್ಡ ವಿಶ್ವದರ್ಜೆಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣವಾಗುತ್ತಿದೆ.ನಮ್ಮ ಬೆಂಗಳೂರಿನ ಆನೇಕಲ್‌ನಲ್ಲಿ 943.46 ಕೋಟಿ ರೂ. ವೆಚ್ಚದಲ್ಲಿ 80,000 ಆಸನಗಳ ಸಾಮರ್ಥ್ಯದ ದೇಶದ 2ನೇ ಅತಿ ದೊಡ್ಡ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣವಾಗುತ್ತಿದೆ. ಈ ಭವ್ಯ ಯೋಜನೆಯು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರಲಿದ್ದು, ನಾಡಿನ ಕ್ರೀಡಾಪಟುಗಳ ಉಜ್ವಲ ಭವಿಷ್ಯಕ್ಕೆ ಭದ್ರ ಬುನಾದಿಯಾಗಲಿದೆ ಎಂದು ಸೋಶಿಯಲ್ ಮೀಡಿಯಾದಲ್ಲಿ ಡಿ.ಕೆ ಶಿವಕುಮಾರ್ ಅವರು ಬರೆದುಕೊಂಡಿದ್ದಾರೆ. ಆದರೆ ಇದಕ್ಕೆ ಇದೀಗ ಕನ್ನಡಿಗರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.ಈ ಯೋಜನೆಯಿಂದ ತಮಿಳುನಾಡಿಗೆ ಲಾಭ ಇನ್ನು ಕರ್ನಾಟಕದ ಈ ಯೋಜನೆಯಿಂದ ಕರ್ನಾಟಕಕ್ಕಿಂತಲೂ ತಮಿಳುನಾಡಿಗೆ ಹೆಚ್ಚು ಲಾಭವಾಗಲಿದೆ ಎಂದು ಹಲವು ಕನ್ನಡಿಗರು ಆಕ್ರೋಶ ಹೊರ ಹಾಕಿದ್ದಾರೆ. ಕರ್ನಾಟಕಕ್ಕೆ ಉಪಯೋಗವಿಲ್ಲ ತಮಿಳುನಾಡಿಗೆ ಮಾತ್ರ ಉಪಯೋಗ ನಾವು ಮಾಡಿರುವ ಯೋಜನೆ ಎಂದು ಯತೀಶ್ ಎನ್ನುವವರು ಹೇಳಿದ್ದಾರೆ. ಮಲ್ಲೇಶ್ ಎನ್ನುವವರು ಅತೀ ದೊಡ್ಡ ಶಾಲೆ ಅತಿದೊಡ್ಡ ಆಸ್ಪತ್ರೆ, ಈ ಎರಡೇ ಬೇಕಾಗಿರೋದು ಎಂದಿದ್ದಾರೆ. ಮಹದೇಶ್ ಎನ್ನುವವರು ಮೊದಲು ಬಡ ಜನರಿಗೆ ಉಚಿತ ಆರೋಗ್ಯ ಆಸ್ಪತ್ರೆಗಳನ್ನು ಕೊಡಿ ಬಡ ಜನರಿಗೆ ಬಡ ಮಕ್ಕಳಿಗೆ ಉಚಿತ ಒಳ್ಳೆಯ ಶಿಕ್ಷಣವನ್ನು ಕೊಡಿ ಎಂದು ಆಗ್ರಹಿಸಿದ್ದಾರೆ. ಇನ್ನೂ ಕೆಲವರು ಅವಕಾಶ ಇದೆ ನಂ 1 ಮಾಡಿ, ಆದರೆ ಈ ಜಾಗದಲ್ಲಿ ಕೈಗಾರಿಕೆ ಇದೆ. ಅನ್ಯ ರಾಜ್ಯದ ಗಡಿಪ್ರದೇಶ ಇದೆ. ಅಲ್ಲದೆ ಸಂಚಾರ ಒತ್ತಡವೂ ಇದೆ. ದಯವಿಟ್ಟು ನೆಲಮಂಗಲ – ತುಮಕೂರು ಮಧ್ಯೆ ಎಲ್ಲಾದರು ಮಾಡಿ ನಮ್ಮ ರಾಜ್ಯದ ಜನರಿಗೆ ಸಹಾಯವಾಗಲಿದೆ ಎಂದು ಹೇಳಿದ್ದಾರೆ. ರವಿ ಸಿಕೆ ಎನ್ನುವವರು ಅಭಿವೃದ್ಧಿ ಬೆಂಗಳೂರಿಗೆ ಮಾತ್ರ ಕೇಂದ್ರೀಕೃತವಾಗಬಾರದು. ದೊಡ್ಡ ಯೋಜನೆಗಳು ಬೆಳವಣಿಗೆಯನ್ನು ತರುತ್ತವೆ, ಆದರೆ ನಾವು ದೀರ್ಘಾವಧಿಯ ಬಗ್ಗೆ ಯೋಚಿಸಬೇಕು ಮತ್ತು ಮೈಸೂರು, ತುಮಕೂರು, ಹುಬ್ಬಳ್ಳಿ ಮತ್ತು ಇತರ ಬೆಳೆಯುತ್ತಿರುವ ಪ್ರದೇಶಗಳಲ್ಲಿ ಸ್ಟೇಡಿಯಂ ನಿರ್ಮಾಣ ಮಾಡಬೇಕು. ಬೆಂಗಳೂರು ಈಗಾಗಲೇ ಸಂಚಾರ, ನೀರು, ಮೂಲಸೌಕರ್ಯ ಮತ್ತು ಜನದಟ್ಟಣೆಯ ಸವಾಲುಗಳನ್ನು ಎದುರಿಸುತ್ತಿದೆ.ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಯು ಉದ್ಯೋಗಗಳನ್ನು ಸೃಷ್ಟಿಸಬಹುದು, ಜೀವನದ ಗುಣಮಟ್ಟವನ್ನು ಸುಧಾರಿಸಬಹುದು ಮತ್ತು ಒಂದು ನಗರದ ಮೇಲಿನ ಒತ್ತಡವನ್ನು ಕಡಿಮೆ ಮಾಡಬಹುದು. ಇಂದಿನ ಯೋಜನೆಯು ಕೇವಲ ಒಂದು ನಗರವಲ್ಲ, ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಮುಂದಿನ ಪೀಳಿಗೆಯನ್ನು ಬೆಂಬಲಿಸಬೇಕು. ಸರ್ಕಾರವು ಹೆಚ್ಚು ವಿಸ್ತೃತ ಬೆಳವಣಿಗೆಯ ಮಾದರಿಯನ್ನು ಪರಿಗಣಿಸುತ್ತದೆ ಎಂದು ಭಾವಿಸುತ್ತೇವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

## ಕೇಂದ್ರ ಮಾದರಿ ವೇತನ ಮತ್ತು ಒಪಿಎಸ್ ಜಾರಿಗೆ ನಿರಂತರ ಒತ್ತಡ: ಸಿ.ಎಸ್. ಷಡಕ್ಷರಿ

◆ ನೈಜ್ಯ ದೆಸೆ ನ್ಯೂಸ್



ರಾಜ್ಯ ಸರ್ಕಾರಿ ನೌಕರರು ಶೀಘ್ರದಲ್ಲಿಯೇ ಕೇಂದ್ರ ಸರ್ಕಾರದ ಮಾದರಿಯಲ್ಲಿ ವೇತನವನ್ನು ಪಡೆದುಕೊಳ್ಳಲಿದ್ದಾರೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲಾ ಪ್ರಯತ್ನಗಳು ಸಾಗುತ್ತಿವೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಸಿ.ಎಸ್. ಷಡಕ್ಷರಿ ಅವರು ತಿಳಿಸಿದ್ದಾರೆ.ನಗರದ ಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಎರಡು ದಿನಗಳ ರಾಜ್ಯ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕೇಂದ್ರ ಮಾದರಿಯ ವೇತನವನ್ನು ಜಾರಿಗೊಳಿಸಲು ಹಾಗೂ ಎನ್ಪಿಎಸ್ (NPS) ಯೋಜನೆಯನ್ನು ರದ್ದುಪಡಿಸಿ, ಹಳೇ ಪಿಂಚಣಿ ಯೋಜನೆ (OPS) ಯನ್ನು ಮರು ಜಾರಿಗೊಳಿಸಲು ಸರ್ಕಾರದ ಮೇಲೆ ನಿರಂತರವಾಗಿ ಒತ್ತಡ ಹೇರಲಾಗುತ್ತಿದೆ.ಈ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸರ್ಕಾರಿ ನೌಕರರಿಗೆ ಯಾವುದೇ ಹೋರಾಟವಿಲ್ಲದೆಯೇ 6ನೇ ಮತ್ತು 7ನೇ ವೇತನ ಆಯೋಗಗಳನ್ನು ಜಾರಿಗೊಳಿಸಿದ್ದರು. ಈ ಸರ್ಕಾರ ಇನ್ನೂ ಎರಡು ವರ್ಷ ಅಧಿಕಾರದಲ್ಲಿರಲಿದ್ದು, ಅಷ್ಟರೊಳಗೆ ಕೇಂದ್ರ ಮಾದರಿಯ ವೇತನವನ್ನು ನೌಕರರು ಪಡೆದುಕೊಳ್ಳಲಿದ್ದಾರೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.ಹಳೇ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳನ್ನು ಭೇಟಿ ಮಾಡಿ ಶೀಘ್ರವಾಗಿ ವರದಿ ತರಿಸಿಕೊಳ್ಳುವಂತೆ ಮನವಿ ಮಾಡಲಾಗಿದೆ. ಎನ್ಪಿಎಸ್ ತೀರ್ಮಾನದ ವರದಿಯನ್ನು ಬೇಗನೆ ನೀಡುವಂತೆ ಕೋರಲಾಗಿದ್ದು, ಒಂದು ವೇಳೆ ಹಳೇ ಪಿಂಚಣಿ ವ್ಯವಸ್ಥೆ ಜಾರಿಯಾಗದಿದ್ದರೆ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.ಖಾಲಿ ಹುದ್ದೆಗಳ ಭರ್ತಿ: ರಾಜ್ಯದಲ್ಲಿ ಸದ್ಯ 2.85 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ಭರ್ತಿ ಮಾಡುವ ನಿಟ್ಟಿನಲ್ಲಿಯೂ ಸಂಘದ ಪ್ರಯತ್ನಗಳು ಮುಂದುವರಿದಿವೆ. ಜೊತೆಗೆ 7ನೇ ವೇತನ ಆಯೋಗದ ಎರಡನೇ ವರದಿ ಅನುಷ್ಠಾನ ಹಾಗೂ ಸರಿಯಾದ ಸಮಯಕ್ಕೆ ತುಟ್ಟಿಭತ್ಯೆ ಬಿಡುಗಡೆ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೇರಲಾಗುತ್ತಿದೆ.ಆರೋಗ್ಯ ಯೋಜನೆ ಮತ್ತು ಪರಿಹಾರ: ನೌಕರರಿಗೆ ಅಪಘಾತ ಪರಿಹಾರ ಸಿಗುತ್ತಿದ್ದು, ನೌಕರರ ಅವಲಂಬಿತರ ಹೆಸರನ್ನು ಆರೋಗ್ಯ ಯೋಜನೆಯಲ್ಲಿ ಸೇರ್ಪಡೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಚಿಕಿತ್ಸಾ ವೆಚ್ಚಗಳ ದರ ಪರಿಷ್ಕರಣೆಗೆ ಸರ್ಕಾರ ಸಮ್ಮತಿ ನೀಡುವ ಭರವಸೆ ಇದೆ ಎಂದು ಅವರು ಹೇಳಿದರು.

# ಇಂದಿನಿಂದ ಸರಕಾರಿ ಪದವಿ ಪೂರ್ವ ಕಾಲೇಜುಗಳ ದಾಖಲಾತಿ ಆಂದೋಲನ: ಪ್ರಾಚಾರ್ಯ ಶಿವರಾಜ

◆ ನೈಜ್ಯ ದೆಸೆ ನ್ಯೂಸ್




ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪನವರ ನಿರ್ದೇಶನದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸರ್ಕಾರ ಒದಗಿಸಿದ ಸೌಲಭ್ಯಗಳನ್ನು ಹಾಗೂ ಕಾಲೇಜುಗಳ ಉತ್ತಮ ಫಲಿತಾಂಶವನ್ನು ಸಾರ್ವಜನಿಕರಿಗೆ ಮುಟ್ಟಿಸುವ ಮೂಲಕ ದಾಖಲಾತಿ ಆಂದೋಲನವನ್ನು ರಾಜ್ಯದಾದ್ಯಂತ ಹಮ್ಮಿಕೊಂಡಿದ್ದು, ತಾಲೂಕಿನಲ್ಲಿ 8 ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಪ್ರಸ್ತುತ ವರ್ಷದಲ್ಲಿ ನಗರದಲ್ಲಿ ಆದರ್ಶ ವಿಜ್ಞಾನ ಮತ್ತು ತಿಡಿಗೋಳ ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಇಂದಿನಿಂದ ದಾಖಲಾತಿ ಆರಂಭಗೊಳ್ಳಲಿವೆ ಎಂದು ಪ್ರಾಚಾರ್ಯರಾದ ಡಾ.ಶಿವರಾಜ.ಎಸ್ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸರ್ಕಾರಿ ಕಾಲೇಜುಗಳಿಗೆ ಕೆ.ಕೆ. ಆರ್.ಡಿ.ಬಿ ವತಿಯಿಂದ ನಗರದ ಕಾಲೇಜುಗಳಿಗೆ 1 ಕೋಟಿ 17 ಲಕ್ಷ ಮತ್ತು ಗ್ರಾಮೀಣ ಭಾಗದ 6 ಕಾಲೇಜುಗಳಿಗೆ 1 ಕೋಟಿ 2 ಲಕ್ಷ ರೂ.ಅನುದಾನ ಅಂದರೆ, ತಾಲೂಕಿನ 8 ಕಾಲೇಜುಗಳಿಗೆ ಒಟ್ಟು 2 ಕೋಟಿ 19 ಲಕ್ಷದ ಬೋಧನೋಪಕರಣಗಳಾದ ಪೋಡಿಯಂ, ಡಿಜಿಟಲ್ ಸ್ಮಾರ್ಟ್ ಬೋರ್ಡ್, ಪ್ರಿಂಟರ್, ಕಲರ್ ಜೆರಾಕ್ಸ್ ಮಷಿನ್, ಕಂಪ್ಯೂಟರ್ ಹಾಗೂ ಚೇರ್ ಗಳು ಮತ್ತು ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಮನೋಭಾವ ಹೆಚ್ಚಿಸಲು ಇ-ಗ್ರಂಥಾಲಯ ಯೋಜನೆಡಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಅಗತ್ಯವಾದ ಪುಸ್ತಕಗಳು ಬಂದಿವೆ. ಪ್ರಸಕ್ತ ವರ್ಷದಲ್ಲಿ ಸರ್ಕಾರದ ವತಿಯಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ನೀಡುವ ಯೋಜನೆ ಜಾರಿಯಾಗಿದೆ.ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ನೆಟ್ ಮತ್ತು ಕೆ'ಸೆಟ್ ಪರೀಕ್ಷೆಗಳಿಗೆ ಆನ್ ಲೈನ್ ತರಬೇತಿ ನೀಡಲಾಗುವುದು. ಶೌಚಾಲಯ, ಶುದ್ಧ ಕುಡಿಯುವ ನೀರು ಮತ್ತು ಉತ್ತಮ ಆಟದ ಮೈದಾನಗಳನ್ನು ಒಳಗೊಂಡಿವೆ. ಜಿಲ್ಲಾ ಮತ್ತು ರಾಜ್ಯ ಹಾಗೂ ರಾಷ್ಟ್ರಮಟ್ಟದವರೆಗೆ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ ಪ್ರತಿಭೆಗಳಿವೆಂದು ತಿಳಿಸಿದರು. ಶೇಖರಯ್ಯಸ್ವಾಮಿ ಮಾತನಾಡಿ, 2025-26ನೇ ಸಾಲಿನ ತಾಲೂಕಿನ ಗೋನವಾರ ಸರ್ಕಾರಿ ಪದವಿ ಪೂರ್ವ ಕಾಲೇಜು ಶೇ.94ರಷ್ಟು, ತುರ್ವಿಹಾಳ ಸರ್ಕಾರಿ ಪದವಿ ಪೂರ್ವ ಕಾಲೇಜು ಶೇ.91ರಷ್ಟು, ಅಲಬನೂರು ಸರ್ಕಾರಿ ಪದವಿ ಪೂರ್ವ ಕಾಲೇಜು ಶೇ.89ರಷ್ಟು ಜಾಲಿಹಾಳ ಸರ್ಕಾರಿ ಪದವಿ ಪೂರ್ವ ಕಾಲೇಜು ಶೇ.75 ರಷ್ಟು ನಗರದ ಬಾಲಕರ ಪದವಿ ಪೂರ್ವ ಕಾಲೇಜು ಶೇ.72 ರಷ್ಟು, ಬಾಲಕಿಯರ ಪದವಿ ಪೂರ್ವ ಕಾಲೇಜು ಶೇ.62 ರಷ್ಟು, ಜವಳಗೇರಾ ಸರ್ಕಾರಿ ಪದವಿ ಪೂರ್ವ ಕಾಲೇಜು ಶೇ.60 ರಷ್ಟು, ಅಂಬಾಮಠ ಸರ್ಕಾರಿ ಪದವಿ ಪೂರ್ವ ಕಾಲೇಜು ಶೇ.57ರಷ್ಟು, 2025-26ನೇ ಸಾಲಿನಲ್ಲಿ ತಾಲೂಕಿನ ಸರ್ಕಾರಿ ಕಾಲೇಜುಗಳಲ್ಲಿ ವಿಷಯವಾರು 100ಕ್ಕೆ 100 ರಷ್ಟು ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ ಕನ್ನಡ-20, ಸಮಾಜಶಾಸ್ತ್ರ-5, ಇತಿಹಾಸ-3, ರಾಜ್ಯಶಾಸ್ತ್ರ-3 ವಿದ್ಯಾರ್ಥಿಗಳು ಅಂಕಗಳನ್ನು ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ ಎಂದು ತಿಳಿಸಿದರು.ಪ.ಜಾ,ಪ.ಪಂ ವಿದ್ಯಾರ್ಥಿಗಳಿಗೆ 270 ರೂ.ಹಾಗೂ ಇನ್ನಿತರರಿಗೆ 811 ರೂ.ಮಾತ್ರ ಸರ್ಕಾರಿ ಶುಲ್ಕ ನಿಗಧಿಗೊಳಿಸಿದೆ. ಉಚಿತ ಪಠ್ಯಪುಸ್ತಕ ವಿತರಣೆ ಪ್ರಸಕ್ತ ವರ್ಷದಿಂದ ಇಲಾಖೆ ಕೊಡುತ್ತಿದೆ ಮತ್ತು ಆನ್ ಲೈನ್ ಹಾಜರಾತಿ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸಿದೆ. ನೀಟ್, ಸಿ.ಇ.ಟಿ ಕೋಚಿಂಗ್ ಕೂಡ ನೀಡಲಾಗುತ್ತಿದೆ. ಈ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಅರ್ಹ ಮತ್ತು ಅನುಭವಿ ಉಪನ್ಯಾಸಕರಿದ್ದಾರೆ. ತಮ್ಮ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.ಈ ಸಂದರ್ಭದಲ್ಲಿ: ಪ್ರಾಚಾರ್ಯರಾದ ಬಸಪ್ಪ ಶಾಂತಿ, ಉಪನ್ಯಾಸಕರಾದ ಡಾ.ಹುಸೇನಪ್ಪ ಅಮರಾಪುರ, ಶರಣಪ್ಪ, ನಾಗರೆಡ್ಡಿ, ಸಿದ್ದನಗೌಡ, ರವಿ ಸಾಸಲಮರಿ, ಕಾಳಿಂಗರೆಡ್ಡಿ, ಚನ್ನಬಸಮ್ಮ, ಬಸವರಾಜ ಯಲಬುರ್ಗಿ, ಶಿವರಾಜ ಗೋನಾಳ, ಸೇರಿದಂತೆ ಇನ್ನಿತರರು ಇದ್ದರು.

## ಸಾಹಿತ್ಯ ಸಿಂಚನ

ಹೆಣ್ಣು
ನನ್ನ ಅವ್ವ,ಅಜ್ಜಿ ಹೇಳುತ್ತಿದ್ದರು
ಮಗಳೇ ಹೆಣ್ಣೆಂದರೆ ಹೀಗಿರಬೇಕು
ಸಹನೆಯ ಕಡಲಾಗಿ ಮಮತೆಯ ಮಡಿಲಾಗಿ
ಧರಣಿ ತೂಕದ ದೇವತೆಯಂತಿರಬೇಕು//

ಮತ್ತೊಬ್ಬರ ಮನೆ ಬೆಳಗುವ ದೀಪವಾಗಬೇಕು
ಅತ್ತೆ ಮಾವ,ಗಂಡನ ಸೇವೆ ಮಾಡುತ್ತಾ
ನೋವು ನಲಿವುಗಳ ಬುತ್ತಿ ಸೊಗಸಾಗಿ ಉಂಡು
ಕಷ್ಟ ಸುಖಗಳ ತವರಿನಲ್ಲಿ ಬಿತ್ತರಿಸದ
ಕರುಣಾಮಯಿ ಆಗಬೇಕು//

ಬಡತನಕ್ಕಾಗಲಿ ಶರೀರದ ಸುಖಕ್ಕಾಗಲಿ
ಪರಪುರುಷನನ್ನು ಮೋಹಿಸದ ಸಾಧ್ವಿಯಾಗಬೇಕು
ಸಂಸಾರ ಸರಿಯಾಗಿ ದೂಗಿಸುವ
ಚತುರೆಯಾಗಬೇಕು
ಸಂಕಟಗಳ ಓಡಿಸುವ ಶಕ್ತಿಯಾಗಬೇಕು
ಮಗಳೇ ಹೆಣ್ಣೆಂದರೆ ಹೀಗಿರಬೇಕು//

– ಶ್ರೀಮತಿ ಕವಿತಾ ಹಿರೇಮಠ

# ಸಾರ್ವಜನಿಕ ಶಾಂತಿ ಪಾಲನಾ ಸಭೆ ಬಕ್ರೀದ್ ಶಾಂತಿ ಸೌಹಾರ್ದದಿಂದ ಆಚರಿಸಿ – ಡಿ ವೈ ಎಸ್ ಪಿ ಮಾಲತೇಶ್ ಕೋನಬೇವ

**ನೈಜ್ಯ ದೆಸೆ ನ್ಯೂಸ್**

ಸಿರುಗುಪ್ಪ–ತ್ಯಾಗ ಬಲಿದಾನದ ಸಂಕೇತ ಈದ್ ಉಲ್ ಅಜ್ ಹಾ ಬಕ್ರೀದ್ ಭಾವೈಕ್ಯತೆ ಶಾಂತಿ ಪ್ರೀತಿ ವಿಶ್ವಾಸ ಸೌಹಾರ್ದತೆಯಿಂದ ಸಮಾಜದ ಎಲ್ಲಾ ಬಾಂಧವರು ಆಚರಿಸಬೇಕು ಎಂದು ಡಿ ವೈ ಎಸ್ ಪಿ ಮಾಲತೇಶ್ ಕೋನಬೇವ ಅವರು ಹೇಳಿದರು ಸಿರುಗುಪ್ಪ ನಗರದ ಪೊಲೀಸ್ ಠಾಣಾ ಸಭಾ ಭವನದಲ್ಲಿ ಕರ್ನಾಟಕ ಸರ್ಕಾರ ಬಳ್ಳಾರಿ ಜಿಲ್ಲಾ ಪೊಲೀಸ್ ವಿಭಾಗ ಸಹಯೋಗದಲ್ಲಿ ಏರ್ಪಡಿಸಿದ ತ್ಯಾಗ ಬಲಿದಾನದ ಸಂಕೇತ ಈದ್ ಉಲ್ ಅಜ್ ಹಾ ಬಕ್ರೀದ್ ಹಬ್ಬದ ಸಾರ್ವಜನಿಕ ಶಾಂತಿಪಾಲನ ಸಭೆಯ ಅಧ್ಯಕ್ಷತೆಯಲ್ಲಿ ಅವರು ಮಾತನಾಡಿ ಸಿರುಗುಪ್ಪ ತಾಲೂಕು ಶಾಂತಿಗೆ ಹೆಸರಾಗಿದೆ ಎಲ್ಲರೂ ಭಾವೈಕ್ಯದಿಂದ ಭೇದ ಭಾವ ಮಾಡದೆ ಪ್ರತಿವರ್ಷದ ಪ್ರಕಾರ ಈ ಬಾರಿಯೂ ಬಕ್ರಿದ್ ಹಬ್ಬವನ್ನು ಶಾಂತಿ ಸುವ್ಯವಸ್ಥೆ ಕಾಪಾಡಿಕೊಂಡು ಹೋಗುವುದರ ಜೊತೆಗೆ ಕಾನೂನು ಪಾಲನೆ ಮಾಡಿ ನಾವೆಲ್ಲ ಪರಸ್ಪರ ಸ್ನೇಹ ಪ್ರೀತಿಯಿಂದ ಬಕ್ರಿದ್ ಆಚರಿಸಬೇಕು ಇದರಿಂದ ಶಾಂತಿ ಸಹ ಬಾಳ್ವೆ ಸಾಧ್ಯ ಸಮಾಜದ ಬಾಂಧವರು ಸರ್ಕಾರದ ನಿಯಮಗಳನ್ನು ಪಾಲಿಸಬೇಕು ಎಂದು ಕರೆ ನೀಡಿ ಸರ್ವರಿಗೂ ಬಕ್ರಿದ್ ಹಬ್ಬದ







ಶುಭಾಶಯ ಹಾರೈಸಿದರು ಪೋಲಿಸ್ ಸರ್ಕಲ್ ಇನ್ಸ್ಪೆಕ್ಟರ್ ವೈ.ಎಸ್. ಹನುಮಂತಪ್ಪ ಅವರು ಸರ್ವರಿಗೂ ಸ್ವಾಗತ ಬಯಸಿ ಮಾತನಾಡುತ್ತಾ ನಮ್ಮಲ್ಲಿ ಮಾನವೀಯ ಗುಣಗಳನ್ನು ಮೂಡಿಸಲು ಹಾಗೂ ಭ್ರಾತೃತ್ವದ ಭಾವನೆ ಎಲ್ಲರಲ್ಲೂ ಮೂಡಲು ಶಾಂತಿ ಪ್ರೀತಿ ವಿಶ್ವಾಸ ಸೌಹಾರ್ದತೆಯಿಂದ ಬಕ್ರೀದ್ ಹಬ್ಬವನ್ನು ಆಚ–'ರಿಸೋಣ ಸಮಾಜದ ಬಾಂಧವರು ಪೊಲೀಸ–ರಿಗೆ ಸಹಕಾರ ನೀಡಬೇಕು ಯಾವುದೇ ರೀತಿ ಅಹಿತಕರ ಘಟನೆಗಳಿಗೆ ಆಸ್ಪದ ನೀಡಬಾರದು ಸರ್ವಧರ್ಮ ಸಮಾನತೆಯಿಂದ ಅವರವರ ಆಚಾರ ವಿಚಾರಕ್ಕೆ ಧಕ್ಕೆ ಬಾರದಂತೆ ಬಕ್ರೀದ್ ಹಬ್ಬವನ್ನು ಸರ್ಕಾರದ ನಿಯಮಾನುಸಾರ ಮುಂಜಾಗ್ರತೆ ವಹಿಸಿ ಪ್ರಾಣಿಗಳ ವಧೆ ಖುರ್ಬಾನಿ ಕೊಡಿರಿ ಎಲ್ಲರಿಗೂ ಬಕ್ರಿದ್ ಹಬ್ಬದ ಶುಭಾಶಯಗಳು ಅವರು ಕೋರಿದರು ಮತ್ತು ವಂದಿಸಿದರು ಪಿಎಸ್ಐ ಪರುಶುರಾಮ್, ಕ್ರೈಂ ಪಿಎಸ್ಐ ಮಲ್ಲಯ್ಯ, ಪ್ರೊಫೆಷನರಿ ಪಿಎಸ್ಐಗಳಾದ ನರೇಶ್, ಶಿವಪ್ರಸಾದ್, ನಿಂಗಣ್ಣ ಮುಖಂಡರಾದ ಖತೀಬ್ ಜಹೀರುದ್ದೀನ್ ಬಾಬು, ಹಾಜಿ ಹಂಡಿ ಹುಸೇನ್ ಬಾಷಾ, ಹಾಜಿ ಚೌದ್ರಿ ಖಾಜಾ ಸಾಬ್, ದೇಶನೂರು ಹಾಜಿ ಅಬ್ದುಲ್ ಗಫೂರ್ ಸಾಬ್, ಉಡ–'ೀಗೋಳು ಖಾಜಾ ಸಾಬ್, ಡಾ. ಮೊಹಮ್ಮದ್ ಅಲಿ, ಸಮಾಜ ಸೇವಕ ಹಾಜಿ ಮೊಹಮ್ಮದ್ ಇಬ್ರಾಹಿಂ, ಮೋದಿನ್, ಮೀರ್ ಹುಸೇನ್, ವಕೀಲರು ಅಮೀರ್ ಬಾಷಾ, ಮುಲ್ಲಾ ದಾದಾ ಖಲಂದರ್, ಮೊಹಮ್ಮದ್ ಅಜೀಮ್, ಡೊಳ್ಳಿ ವಲಿ ರಜಾ, ಬೆಳಗಲ್ ಖಾಜಾಸಾಬ್, ವಲಿಸಾಬ್, ಅಲ್ಲಾ ಭಕ್ಷಿ, ಇಬ್ರಾಹಿಂಪುರ್ ಎಂ.ಖಾದರ್ ಸಾಬ್ ವಿವಿಧ ಸಮುದಾಯದ ಪ್ರಮುಖರು ಪೊಲೀಸ್ ಸಿಬ್ಬಂದಿ ಇದ್ದರು

## ಇಂದುಲಿಂಗಸುಗೂರಿನ ಶ್ರೀ ಘನಮಠೇಶ್ವರ ಸೌಹಾರ್ದ ಸಹಕಾರಿಯಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭ

**ನೈಜ್ಯ ದೆಸೆ ನ್ಯೂಸ್**



ಲಿಂಗಸುಗೂರು: ಇಂದು ಸಹಕಾರಿ ಕ್ಷೇತ್ರವೆಂದರೆ ಬರಿ ಸಾಲ , ಬಡ್ಡಿ, ಮತ್ತಿತ್ತರ ವ್ಯವಹಾರಕ್ಕೆ ಮಾತ್ರ ಸೀಮಿತಗೊಂಡಿರುವ ಯುಗದಲ್ಲಿ ಇದರ ಜೊತೆಗೆ ಸಾಮಾಜಿಕ ವಲಯದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಸಮಾಜಕ್ಕೆ ಪರಿಚಯಿಸಿ ಸತ್ಕರಿಸಿ ಗೌರವಿಸಿ ಮತ್ತಷ್ಟು ಶಕ್ತಿ ತುಂಬುವ ಕೆಲಸವನ್ನು ಮಾಡುತ್ತಿರುವ ಲಿಂಗಸುಗೂರು ಪಟ್ಟಣದಲ್ಲಿ ಸ್ಥಾಪಿತವಾದ ಶ್ರೀ ಘನಮಠೇಶ್ವರ ಸೌಹಾರ್ದ ಸಹಕಾರಿ ಸಂಘ ನಿಯಮಿತ ವತಿಯಿಂದ ಇಂದು ಮದ್ಯಾಹ್ನ 3.30 ನಿಮಿಷಕ್ಕೆ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಘನಮಠೇಶ್ವರ ಸೌಹಾರ್ದ ಸಹಕಾರಿ ಸಂಘದ ಅದ್ಯಕ್ಷರಾದ ಕರಣ್ ಕುಮಾರ ಮಾ.ಪಾ ತಿಳಿಸಿ ಮಾತನಾಡುತ್ತಾ ಈ ಒಂದು ಕಾರ್ಯಕ್ರಮಕ್ಕೆ ದಿವ್ಯ ಸಾನಿದ್ಯವನ್ನು ಶ್ರೀ ಮನಿಪ್ರ ಗುರುಬಸವ ಮಹಾಸ್ವಾಮಿಗಳು ಘನಮಠೇಶ್ವರ ಮಠ ಸಂತೇಕೆಲ್ಲೂರು, ಯೋಗ ಸಂಜೀವನ ಅದ್ಯಕ್ಷ ಅಶೋಕ ಬಿಜಾಪೂರ,ಅಮರೇಗೌಡ ಮಾ.ಪಾ, ಉಮೇಶ ಶಿಕ್ಷಕರು,ಹಾಗೂ ಸರ್ವ ಸದಸ್ಯರು, ಶಿಕ್ಷಕರು, ಇನ್ನೂ ಅನೇಕರು ಪಾಲ್ಗೊಳ್ಳುವರು,ಈ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಎಲ್ಲರೂ ಆಗಮಿಸಿ ಯಶಸ್ವಿಗೊಳಿಸಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಗುಂಡಪ್ಪ ಎಸ್ ಕುಂಬಾರ,ಅಪ್ಪಾಜಿಗೌಡ ಮಾ.ಪಾ ಸಿಇಒ, ತಿಮ್ಮಣ್ಣಗೌಡ ಮ್ಯಾನೆಜರ್ ಇನ್ನಿತರರು ಇದ್ದರು.

# ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಲಿ

**ನೈಜ್ಯ ದೆಸೆ ನ್ಯೂಸ್**

ಮುಸ್ಲಿಂ ಸಮುದಾಯದ ಮಕ್ಕಳು ಶಿಕ್ಷಣವಂತರಾಗಬೇಕಿದೆ. ಹೆಣ್ಣುಮಕ್ಕಳಿಗೆ ವಿಪುಲ ಅವಕಾಶಗಳಿದ್ದು, ಪ್ರತಿಯೊಬ್ಬರೂ ಸದ್ಬಳಕೆ ಮಾಡಿಕೊಳ್ಳಬೇಕಿದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಮರೇಗೌಡ ಪಾಟೀಲ್ ಅಭಿಪ್ರಾಯಪಟ್ಟರು. ಪಟ್ಟಣದ ಕರೀಮ್ ಕಾಲನಿಯ ಬೀಬಿ ಫಾತೀಮಾ ಶಾದಿಮಹಲ್‌ನಲ್ಲಿ ತಾಲೂಕು ಅಂಜುಮನ್ ಇಸ್ಲಾಂ ಪಂಚ ಕಮಿಟಿ, ಅಂಜುಮನ್–ಏ–ಇಸ್ಲಾಂ ಪಂಚ ಕಮಿಟಿ ನಗರ ಘಟಕ ಮತ್ತು ಖಬರಸ್ತಾನ್ ಕಮಿಟಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 2ನೇ ವರ್ಷದ 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಅಲ್ಪ ಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಶೈಕ್ಷಣಿಕ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಮುಸ್ಲಿಂ ಸಮಾಜದಲ್ಲಿ ಶಿಕ್ಷಣದಿಂದ ಮಕ್ಕಳು ಹೆಚ್ಚು ಉನ್ನತ ಸಾಧನೆ ಮಾಡುವ ಮೂಲಕ ಹೊರ ಹೊಮ್ಮಬೇಕಿದೆ ಎಂದರು.ಜಾನಪದ ವಿದ್ವಾಂಸ ಡಾ.ಇಮಾಮಸಾಬ್ ಹಡಗಲಿ ಉಪನ್ಯಾಸ ನೀಡಿ, ಮುಸ್ಲಿಂ ಸಮಾಜದ ಮಕ್ಕಳಲ್ಲಿ ಉತ್ತಮ ಪ್ರತಿಭೆ ಇದ್ದು, ಸಮಾಜದ ತಾಯಂದಿರು ಮಕ್ಕಳ ಬಗ್ಗೆ ಕಾಳಜಿವಹಿಸಿ ಉನ್ನತ ಶಿಕ್ಷಣದ ಜತೆಗೆ ಸಂಸ್ಕಾರ ಕಲಿಸಬೇಕು. ಮಕ್ಕಳಿಗೆ ವಿದ್ಯೆಯನ್ನು ಕಲಿಸಿ ಒಳ್ಳೆಯ ಉದ್ಯೋಗಸ್ಥರನ್ನಾಗಿ ಮಾಡಬೇಕಾಗಿದೆ ಎಂದರು.ಮೌಲಾನಾ ಫಜಲೇ ಅಜೀಮ್ ಮದರಸಾ ದಾರೂಲ್ ಊಲುಮ್ ಆಶ್ರಫಿಯಾ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. ಕಾಡಾ ಅಧ್ಯಕ್ಷ ಹಸನಸಾಬ್ ದೋಟಿಹಾಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರಾಗೃಹ ಸುಧಾರಣೆ ಸೇವೆ ಮುಖ್ಯ ಅಧೀಕ್ಷಕ ಡಾ. ಐ.ಜಿ ಮ್ಯಾಗೇರಿ ಮಾತನಾಡಿದರು. ಮಾಜಿ ಶಾಸಕ ಕೆ.ಶರಣಪ್ಪ, ಪಂಚ ಕಮಿಟಿ ಅಧ್ಯಕ್ಷ ಅಹ್ಮದ್ ಆದೋನಿ,



ಉಪಾಧ್ಯಕ್ಷ ಮೈನುದ್ದೀನ್ ಮುಲ್ಲಾ, ಬಿಇಒ ಉಮಾದೇವಿ ಬಸಾಪೂರ, ಪ್ರಮುಖರಾದ ಎಚ್.ಆರ್.ಶೇಖ್, ಡಾ.ಜೀವನಸಾಬ ಬಿನ್ನಾಳ್, ಖಾಜಾಸಾಬ್ ಅತ್ತಾರ, ಡಾ.ಶೇಖ್ ಜವ್ವಾದ್, ಹುಸೇನ್, ಎಚ್.ಎಸ್.ಉಸ್ತಾದ್, ಮೌಲಾನ ಅಹ್ಮದ್ ಹುಸೇನ್, ಮೌಲಾನಾ ಜಾಫರ್ ಸಾಧಿಕ್, ಮೆಹಬೂಬ್ ಖುಸುಬೂ, ಡಾ.ಬಾಬು, ಪುರಸಭೆ ಮಾಜಿ ಸದಸ್ಯ ಮೈಬುಸಾಬ್ ಕಮ್ಮಾರ, ರಾಜೇಸಾಬ್ ಗುಮಗೇರಾ ಇನ್ನಿತರರಿದ್ದರು.

## ರಾಷ್ಟ್ರೀಯ ಐಕ್ಯತಾ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**



ಮುದಗಲ್ : ಸಾರ್ವಜನಿಕರೆಲ್ಲರೂ ಕಾನೂನು ನಿಯಮಗಳನ್ನು ಪಾಲಿಸಬೇಕು. ಪ್ರತಿಯೊಬ್ಬರೂ ಕಾನೂನಿಗೆ ಗೌರವ ನೀಡುವ ಮೂಲಕ ಸುಧಾರಿತ ಸಮಾಜ ನಿರ್ಮಾಣ ಮಾಡುವಲ್ಲಿ ಪಾತ್ರ ವಹಿಸಬೇಕೆಂದು ಪಿಎಸ್ಐ ವೆಂಕಟೇಶ ಮಾಡಗೇರಿ ಹೇಳಿದರು. ಪಟ್ಟಣದ ಪೊಲೀಸ್ ಠಾಣೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ದೇಶದ ಪ್ರಪ್ರಥಮ ಕೇಂದ್ರ ಸಚಿವ ಹಾಗೂ ಉಪ ಪ್ರಧಾನಿ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಜನ್ಮದಿನ ಹಾಗೂ ರಾಷ್ಟ್ರೀಯ ಐಕ್ಯತಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.ಉಕ್ಕಿನ ಮನುಷ್ಯ ಎಂದೇ ಖ್ಯಾತರಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದ ಸ್ಮರಣಾರ್ಥವಾಗಿ ಮತ್ತು ದೇಶದ ಏಕತೆ, ಸಮಗ್ರತೆಯ ಸಂದೇಶ ಸಾರಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಹನೀಯರ ಆದರ್ಶಗಳನ್ನು ಪಾಲಿಸೋಣ ಎಂದರು. ಠಾಣೆಯ ಸಿಬ್ಬಂದಿ, ಆಟೋ ಚಾಲಕರು, ಸಾರ್ವಜನಿಕರಿದ್ದರು.






# ಕಾರ್ಮಿಕರು ಸಂಘಟಿತರಾಗಲು ಮೈತ್ರೇಯಿ ಕೃಷ್ಣನ್ ಕರೆ

## ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ ಎಐಸಿಸಿಟಿಯುದ ನಾಮಫಲಕ ಉದ್ಘಾಟನೆ

**ನೈಜ್ಯ ದೆಸೆ ನ್ಯೂಸ್**

ನೀರಾವರಿ ಕಾರ್ಮಿಕರು ಸಂಘಟಿತರಾಗುವ ಮೂಲಕ ಶಾಸನಬದ್ಧ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದು ಎಐಸಿಸಿಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೈತ್ರೇಯಿ ಕೃಷ್ಣನ್ ಕರೆ ನೀಡಿದರು.ಅವರು ತಾಲ್ಲೂಕಿನ ಜವಳಗೇರಾದಲ್ಲಿ ಗುರುವಾರ ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ ಎಐಸಿಸಿಟಿಯುದ ನಾಮಫಲಕವನ್ನು ಉದ್ಘಾಟಿಸಿ ಮಾತನಾಡಿದರು. “ತುಂಗಭದ್ರಾ ಎಡದಂಡೆ



ಮುಖ್ಯ ನಾಲೆ ಹಾಗೂ ಉಪ ನಾಲೆಗಳ ಮೂಲಕ ರೈತರ ಗದ್ದೆಗಳಿಗೆ ನೀರು ಹರಿಸುವ ನಿಟ್ಟಿನಲ್ಲಿ ಕಾರ್ಯ ಕ್ಷಮತೆಯಿಂದ ಕೆಲಸ ಮಾಡುತ್ತಿರುವ ಕಾರ್ಮಿಕರು ಉದ್ಯೋಗ ಅಭದ್ರತೆ, ವೇತನ, ಮೂಲಭೂತ ಸೌಲಭ್ಯಗಳ ಕೊರತೆ ಹಾಗೂ ಕೆಲಸದ ವೇಳೆ ಸುರಕ್ಷತೆ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಈ ಬಗ್ಗೆ ಸಂಘ ಹೋರಾಟ ನಡೆಸುತ್ತಿದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಎಐಸಿಸಿಟಿಯು ರಾಜ್ಯ ಸಹ ಕಾರ್ಯದರ್ಶಿ ನಾಗರಾಜ ಪೂಜಾರ್, ಕೆ. ನಾಗಲಿಂಗಸ್ವಾಮಿ ಕೇಂದ್ರ ಸಮಿತಿ ಅಧ್ಯಕ್ಷರು ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ ಮಾತನಾಡಿದರು.ಈ ವೇಳೆ: ಜಿಲ್ಲಾಧ್ಯಕ್ಷ ಅಜೀಜ್ ಜಾಗೀದಾರ್, ಜವಳಗೇರಾ ಉಪ ವಿಭಾಗದ ಅಧ್ಯಕ್ಷ ವೀರೇಶ ಜವಳಗೇರಾ, ದೇವಣ್ಣ ನಾಯಕ, ತಿಮ್ಮಣ್ಣ ತಿಮ್ಮಾಪುರ, ಮಸ್ಕಿ ವಿಭಾಗದ ಮಹ್ಮದ್‌ಸಾಬ್, ಕುಮಾರ ಪವಾಡಶೆಟ್ಟಿ ಹಾಗೂ ಕಾರ್ಮಿಕ ಮುಖಂಡರು, ಪದಾಧಿಕಾರಿಗಳು, ಸದಸ್ಯರು, ಇದ್ದರು.


## ನೇಮಕಾತಿ ಪ್ರಕಟಣೆ

CESCOM ನೇಮಕಾತಿ 2026: 200 ಅಪ್ರೆಂಟಿಸ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಲಿಮಿಟೆಡ್ ಮೈಸೂರು, ಅಇಖಅಔಓ ಅಧಿಕೃತ ಅಧಿಸೂಚನೆಯ ಮೇ 2026 ರ ಮೂಲಕ ಅಪ್ರೆಂಟಿಸ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.
ಮೈಸೂರು – ಕರ್ನಾಟಕದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು (ಪದವೀಧರರು / ಎಂಜಿನಿಯರಿಂಗ್ ಅಲ್ಲದ ಪದವೀಧರರು ಮತ್ತು 2022, 2023, 2024, 2025 ಮತ್ತು 2026 ರಲ್ಲಿ ಉತ್ತೀರ್ಣರಾದ ಡಿಪ್ಲೊಮಾ ಹೊಂದಿರುವವರು) ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 29–ಮೇ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಅಧಿಕೃತ ವೆಬ್‌ಸೈಟ್:cescmysore.karnataka.gov.in

# ಸರಕಾರ ಗೊಬ್ಬರ ಕಳ್ಳದಂಧೆಗೆ ಬ್ರೇಕ್ ಹಾಕಲಿ : ಮುಜಾಹಿದ್ ಮರ್ಚೆಡ್ ಆಗ್ರಹ

**ನೈಜ್ಯ ದೆಸೆ ನ್ಯೂಸ್**

ರಾಯಚೂರು ಮೇ 24 : ಭಾರತದಲ್ಲಿ ವಾರ್ಷಿಕವಾಗಿ 35–36 ಮಿಲಿಯನ್ ಟನ್ ಯೂರಿಯಾ ಬಳಕೆಯಾಗುತ್ತಿದ್ದರೂ, ಸಬ್ಸಿಡಿ ಯೂರಿಯಾದಲ್ಲಿ ಸುಮಾರು 20–25% ರಷ್ಟು ಅನಧಿಕೃತವಾಗಿ ಕೈಗಾರಿಕೆಗಳಿಗೆ ಮತ್ತು ಇತರೆ ಕ್ಷೇತ್ರಗಳಿಗೆ ಕಳ್ಳಮಾರ್ಗದಲ್ಲಿ ತಿರುಗುತ್ತಿರುವುದು ಆತಂಕಕಾರಿ ವಿಚಾರ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ (ರಿ) ಜಿಲ್ಲಾ ಕಾರ್ಯಾಧ್ಯಕ್ಷರಾದ ಮುಜಾಹಿದ್ ಮರ್ಚೆಡ್ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ರಾಯಚೂರಿನಲ್ಲಿ ಜಂಟಿ ಪ್ರಕಟಣೆ ನೀಡಿರುವ ಅವರು, ಈ ವ್ಯವಸ್ಥಿತ ಕಳ್ಳದಂಧೆಯಿಂದಾಗಿ ನಿಜವಾದ ರೈತರಿಗೆ ಗೊಬ್ಬರದ ಕೊರತೆ, ಬೆಲೆ ಏರಿಕೆ ಮತ್ತು ಬೆಳೆ ಉತ್ಪಾದನೆ ಕುಸಿತದಂತಹ ಗಂಭೀರ ಸಮಸ್ಯೆಗಳು ಎದುರಾಗುತ್ತಿವೆ ಎಂದು ತಿಳಿಸಿದ್ದಾರೆ.ಡಿ.ಎ.ಪಿ. (ಆಂಕ) ಗೊಬ್ಬರದ ಕೊರತೆ ಹಾಗೂ ದರ ಏರಿಕೆಯಿಂದಾಗಿ ಫಾಸ್ಫರಸ್ ಪೋಷಕಾಂಶದ ಲಭ್ಯತೆ ಸೀಮಿತವಾಗಿದ್ದು, ಇದರ ನೇರ ಪರಿಣಾಮವಾಗಿ ಬೆಳೆ ತೂಕ ಮತ್ತು ಉತ್ಪಾದಕತೆ ಕುಸಿಯುತ್ತಿದೆ. ಪರಿಣಾಮವಾಗಿ ರೈತರು ಹೆಚ್ಚಿದ ಬೆಲೆಯಲ್ಲಿ ಗೊಬ್ಬರ ಖರೀದಿಸಲು ಸಾಲದ ಸುಳಿಗೆ ಸಿಲುಕುತ್ತಿದ್ದಾರೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ. ಇದಲ್ಲದೆ, ಕೆಲ ಪ್ರದೇಶಗಳಲ್ಲಿ ಗೊಬ್ಬರ ವಿತರಣೆಯ ಹೆಸರಿನಲ್ಲಿ ರೈತರ ಬಯೋಮೆಟ್ರಿಕ್ ಮಾಹಿತಿಯನ್ನು ದ ುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿವೆ. ರೈತರಿಗೆ ಗೊಬ್ಬರ ನೀಡದೇ ಅವರ ಬೆರಳಚ್ಚು ಪಡೆದು, ನಂತರ ಆ ಗೊಬ್ಬರವನ್ನು ಕಾಳಸಂತೆಕೋರರು ಕಳ್ಳಮಾರುಕಟ್ಟೆಗೆ ತಿರುಗಿಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ.ಈ ಹಿನ್ನಲೆಯಲ್ಲಿ ಅಮಾಯಕ ರೈತರು ತಮ್ಮ ಹೆಸರಿನ ಗೊಬ್ಬರವನ್ನು ಪಡೆಯಲು ಸಾಧ್ಯವಾಗದೆ, ಹೊರ ಮಾರುಕಟ್ಟೆಯಲ್ಲಿ ಅಧಿಕ ಬೆಲೆಗೆ ಖರೀದಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಕೆಲವರಿಗೆ ಸಂಪೂರ್ಣವಾಗಿ ಗೊಬ್ಬರವೇ ಸಿಗದೆ ಸಂಕಷ್ಟ ಎದುರಾಗಿದೆ. ಇದರ ಪರಿಣಾಮವಾಗಿ ಬೆಳೆ ನಷ್ಟ, ಉತ್ಪಾದನಾ ವೆಚ್ಚ ಹೆಚ್ಚಳ ಹಾಗೂ ಕಡಿಮೆ ಆದಾಯದಿಂದ ರೈತರ ಆರ್ಥಿಕ ಸ್ಥಿತಿ ಹದಗೆಡುತ್ತಿದೆ ಎಂದು ಅವರು ತಿಳಿಸಿದ್ದಾರೆ. ಗೊಬ್ಬರ ಸರಬರಾಜು ವ್ಯವಸ್ಥೆಯನ್ನು ಪಾರದರ್ಶಕವಾಗಿ ಪರಿಶೀಲಿಸಿ ತಕ್ಷಣ ತಪಾಸಣೆ ನಡೆಸಬೇಕು, ಯೂರಿಯಾ ಹಾಗೂ ಡಿ.ಎ.ಪಿ. ಗೊಬ್ಬರಗಳ ಅನಧಿಕೃತ ತಿರುಗಾಟ ಮತ್ತು ಕಳ್ಳಸಾಗಣೆ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು, ಬಯೋಮೆಟ್ರಿಕ್ ಆಧಾರಿತ ವಿತರಣಾ ವ್ಯವಸ್ಥೆಯನ್ನು ಆಡಿಟ್ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ. ಅದರೊಂದಿಗೆ ತಾತ್ಕಾಲಿಕವಾಗಿ ಬೆಲೆ ನಿಯಂತ್ರಣ, ಹೆಚ್ಚುವರಿ ಸಬ್ಸಿಡಿ, ಸಾಲ ಮನ್ನಾ ಹಾಗೂ ಬೆಂಬಲ ಬೆಲೆಯಂತಹ ಪರಿಹಾರ ಕ್ರಮಗಳನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿರುವ ಮುಜಾಹಿದ್ ಮರ್ಚೆಡ್, ಸರ್ಕಾರ ಹಾಗೂ ಸಂಬಂಧಿತ ಇಲಾಖೆಗಳು ಯುದ್ಧೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಎಚ್ಚರಿಕೆ ನೀಡಿದ್ದಾರೆ.



## ಜಾಲಹಳ್ಳಿ ಸಮೀಪದ ನವಿಲಗುಡ್ಡ ಗ್ರಾಮದಲ್ಲಿ ಭಾರಿ ಮಳೆಗೆ ತಪ್ಪಿದ ಅನಾಹುತ

**ನೈಜ್ಯ ದೆಸೆ ನ್ಯೂಸ್**




**ಜಾಲಹಳ್ಳಿ ಮೇ 24 : ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಸಮೀಪದ ನವಿಲಗುಡ್ಡ ಗ್ರಾಮದಲ್ಲಿ ಕಳೆದ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಹಲವು ಅವಾಂತರಗಳು ಸಂಭವಿಸಿವೆ. ಗ್ರಾಮದ ಶಾಲೆಯ ಕಂಪೌಂಡ್ ಮೇಲೂ ಹಾಗೂ ಕೆಲವು ಮನೆಗಳ ಮೇಲೂ ದೊಡ್ಡ ಗಿಡಗಳು ಉರುಳಿಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಇದರಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ. ಇದೇ ವೇಳೆ ನವಿಲಗುಡ್ಡ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಕಂಬಗಳು ಉರುಳಿಬಿದ್ದ ಪರಿಣಾಮ ವಿದ್ಯುತ್ ಸಂಪರ್ಕ ಸಂಪೂರ್ಣ ಕಡಿತಗೊಂಡಿದೆ. ಗ್ರಾಮದಲ್ಲಿ ಕತ್ತಲೆ ಆವರಿಸಿದ್ದು ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ. ಹಾನಿಗೊಳಗಾದ ಮನೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಸೂಕ್ತ ಪರಿಹಾರ ಒದಗಿಸಬೇಕು ಎಂದು ಗ್ರಾಮದ ಮುಖಂಡರಾದ ಶಿವನಗೌಡ ಮಾಲಿಪಾಟೀಲ್ ಹಾಗೂ ಗ್ರಾಮಸ್ಥರು ಆಗ್ರಹಿಸಿದ್ದಾರೆ.**

# ಕಡು ಭ್ರಷ್ಟಾಚಾರಕ್ಕೆ ಸಾಕ್ಷಿಯಾದ ಉಟಕನೂರು ಗ್ರಾಮಾಡಳಿತಾಧಿಕಾರಿಗಳ ತನಿಖೆಗೆ ಆಗ್ರಹ

**ನೈಜ್ಯ ದೆಸೆ ನ್ಯೂಸ್**

"ಹಳ್ಳಿಗಳ ಅಭಿವೃದ್ಧಿ ಆದರೆ ದೇಶದ ಅಭಿವೃದ್ಧಿ ಆಗುತ್ತದೆ ಅನ್ನುವ ಸಾಮಾನ್ಯ ಮಾತು ಭ್ರಷ್ಟಾಚಾರದ ಕೂಪದಲ್ಲಿ ಬಿದ್ದು ನರಳುತ್ತಿದೆ"ಮಾನ್ವಿ: ತಾಲೂಕಿನ ಉಟಕನೂರು ಗ್ರಾಮ ಪಂಚಾಯಿತಿಯಲ್ಲಿ 15ನೇ ಹಣಕಾಸು ಯೋಜನೇಯ ಅನುದಾನ ಬಳಕೆಯಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪ ಕೇಳಿ ಬರುತ್ತಲೇ ಇದೆ. ಅದೇ ರೀತಿ ಈ ವರ್ಷವು ನಡೆದಿದ್ದು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತನಿಖೆ ನಡೆಸುವಂತೆ ಭೀಮ ಯುಗ ಸೇನೆಯ ಮುಖಂಡರಾದ ಬಸವರಾಜ ಬಾಗಲವಾಡ ಆಗ್ರಹಿಸಿದರು. ಪತ್ರಿಕಾಭವನದಲ್ಲಿ ಇಂದು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 15ನೇ ಹಣಕಾಸಿನ ಯೋಜನೆಯಡಿಯಲ್ಲಿ 2025–26ನೇ ಸಾಲಿನ ಕೇಂದ್ರದ ಅನುದಾನ ರೂ.13,81,000 ಲಕ್ಷ ರೂಪಾಯಿ ಹಾಗೂ ರಾಜ್ಯದ ಅನುದಾನ ರೂ.12,00,000 ಲಕ್ಷ ರೂಪಾಯಿ ಅದೇ ರೀತಿ ಪ್ರಸ್ತುತ 2026–27ನೇ ಸಾಲಿನಲ್ಲಿ ರೂ.13,55,278 ಲಕ್ಷ ರೂಪಾಯಿ ಅನುದಾನ ಮಂಜೂರಾಗಿದೆ. ಆದರೆ ಕಾಮಗಾರಿಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಇಲ್ಲದೆ ಅನುದಾನದ ಬಳಕೆ ನಡೆದಿದೆ ಆರೋಪಿಸಿದರು.ಗ್ರಾಮ ಪಂಚಾಯಿತಿ ವತಿಯಿಂದ ಕೈಗೊಂಡ ಕೆಲ ಅಭಿವೃದ್ಧಿ ಕಾಮಗಾರಿಗಳು ಕೇವಲ ದಾಖಲೆಗಳಲ್ಲಿ ಮಾತ್ರ ಕಾಣುತ್ತಿದ್ದು ವಾಸ್ತವ ಚಿತ್ರಣ ಬೇರೆ ಇದೆ ಸ್ಥಳ ಪರಿಶೀಲನೆ ನಡೆಸಿದರೆ ನೈಜ ಸ್ಥಿತಿ




ಬಯಲಾಗುತ್ತದೆ ಹೇಳಿದರು. ಅವೈಜ್ಞಾನಿಕ ಜೆಜೆಎಂ ಕುಡಿಯುವ ನೀರು ಕಾಮಗಾರಿ, ಹದಗೆಟ್ಟ ರಸ್ತೆ ದುರಸ್ಥಿ ಮಾಡಲು ಸಾಕಷ್ಟು ಹೋರಾಟ ಮನವಿ ಮಾಡಿದ್ದರೂ ಸ್ಪಂದನೆ ನೀಡುತ್ತಿಲ್ಲ, ಸ್ವಚ್ಛತಾ ಕಾಮಗಾರಿಗಳಲ್ಲಿ ಗುಣಮಟ್ಟ ಕಾಪಾಡದೇ ಹಣ ದುರ್ಬಳಕೆ ಮಾಡಲಾಗಿದೆ ಎಂದು ಹೇಳಿದರು.ಹಿಂದಿನ ಗ್ರಾಮ ಪಂಚಾಯತಿ ಅಭಿರುದ್ಧಿ ಅಧಿಕಾರಿಗಳಾಗಿದ್ದ ಶ್ವೇತ ಕುಲಕರ್ಣಿ ನಾಗಭೂಷಣ್ ಕಾಂಬ್ಳೆ ಅವರ ಭ್ರಷ್ಟಾಚಾರ ಕಾಟಾಚಾರದ ತನಿಖೆ ಹಾಗೂ ಅವ್ಯವಹಾರ ಎಸಗಿದ ಹಣ ಜಪ್ತಿ ಮಾಡಿಕೊಳ್ಳದಿರುವ ಘಟನೆ ಮಾಸುವ ಮುನ್ನವೇ ಪ್ರಸ್ತುತ ಪಿಡಿಓ ಜುಬೇರ್ ನಾಯ್ಕ ಅವರ ಆಡಳಿತ ಅವಧಿಯಲ್ಲಿ ಮತ್ತೆ ಭ್ರಷ್ಟಾಚಾರ ನಡೆದಿರುವುದು ಈ ಫೆಡಂಭೂತ ಆಳವಾಗಿ ಬೇರು ಬಿಟ್ಟಿರುವುದು ಸಾರ್ವಜನಿಕರ ಬೇಸರಕ್ಕೆ ಕಾರಣವಾಗಿದೆ. ಇಷ್ಟೇ ಅಲ್ಲದೇ ಮಾಹಿತಿ ಹಕ್ಕು ಕಾಯಿದೆಯ ಉಲ್ಲಂಘನೆ ಕೂಡ ಮಾಡುತ್ತಿದ್ದಾರೆ. ಅನುದಾನ ಬಳಕೆಯ ಸಂಪೂರ್ಣ ಮಾಹಿತಿ ಸಾರ್ವಜನಿಕರಿಗೆ ನೀಡಲಾಗಿಲ್ಲ. ಕಾಮಗಾರಿಗಳ ವೆಚ್ಚ ಟೆಂಡರ್ ಪ್ರಕ್ರಿಯೆ ಹಾಗೂ ಬಿಲ್ ಪಾವತಿ ವಿವರಗಳನ್ನು ಬಹಿರಂಗ ಪಡಿಸಬೇಕು ಎಂದು ಒತ್ತಾಯಿಸಿದರು.ಈ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆಯ ಹಿರಿಯ ಅಧಿಕಾರಿಗಳು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿ ಕೊಂಡಿದ್ದರೆ ಅದನ್ನು ವಾಪಸ್ ವಸೂಲಿ ಮಾಡಿ ಮೂಲ ಸೌಕರ್ಯ ಅಭಿರುದ್ಧಿಗೆ ಬಳಕೆ ಮಾಡಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಸೇನೆಯ ಸದಸ್ಯರಾದ ಉಟಕನೂರಿನ ಶ್ರೀಶೈಲ, ಮರಿಬಸವ, ಮಂಜುನಾಥ, ಮರಿಬಸವ ಮಟ್ಟೂರು, ಭೀಮಪ್ಪ ಸೇರಿದಂತೆ ಇತರರು ಹಾಜರಿದ್ದರು.

# ಭಾರತ ರತ್ನ ಅಲ್ಲ, ಭಾರತಕ್ಕೇ ಸಿಕ್ಕಿದ ಅಪೂರ್ವ ರತ್ನ


**ನೈಜ್ಯ ದೆಸೆ ನ್ಯೂಸ್**



ತುಮಕೂರು: ಏಪ್ರಿಲ್ 1 2026 ರಂದು ತುಮಕೂರಿನ ಸಿದ್ಧಗಂಗಾ ಕ್ಷೇತ್ರದ ಮಣ್ಣಲ್ಲಿ ಒಂದು ಅಪೂರ್ವ ಬೆಳಕು ಮೂಡಿತ್ತು. ಕಾರಣ: ನಡೆದಾಡುವ ದೇವರು, ತ್ರಿವಿಧ ದಾಸೋಹಿ, ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿಗಳ ಜಯಂತಿ. ಆ ದಿನ ದೇಶದ ಪ್ರಥಮ ಪ್ರಜೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸ್ವತಃ ಮಠಕ್ಕೆ ಆಗಮಿಸಿ ಸ್ವಾಮೀಜಿಗಳ ಗದ್ದುಗೆಗೆ ಪುಷ್ಪನಮನ ಸಲ್ಲಿಸಿದರು. ವೇದಿಕೆಯ ಮೇಲೆ ಗಣ್ಯರ ದಂಡು, ಕೆಳಗೆ ಲಕ್ಷ ಲಕ್ಷ ಭಕ್ತರ ಸಾಗರ. ಎಲ್ಲರ ಎದೆಯಲ್ಲಿ ಒಂದೇ ಮಿಡಿತ– "ಇವತ್ತು ಈ ಪವಿತ್ರ ವೇದಿಕೆಯಲ್ಲೇ, ರಾಷ್ಟ್ರಪತಿಗಳ ಬಾಯಿಂದಲೇ ನಮ್ಮ ಸ್ವಾಮೀಜಿಗೆ ಭಾರತ ರತ್ನ ಘೋಷಣೆ ಆಗಬಹುದೇನೋ". ಗಂಟೆಗಳು ಉರುಳಿದವು. ಭಾಷಣಗಳು ಮುಗಿದವು. ಜೈಕಾರ ಮೊಳಗಿತು. ಆದರೆ ಕಾಯುತ್ತಿದ್ದ ಆ ಒಂದು ಮಾತು ಮಾತ್ರ ಬರಲೇ ಇಲ್ಲ. ಘೋಷಣೆ ಆಗಲಿಲ್ಲ. ವೇದಿಕೆ ನಿಧಾನವಾಗಿ ಖಾಲಿಯಾಯಿತು. ಜನರ ಮುಖದಲ್ಲಿ ಸಣ್ಣ ನಿರಾಸೆಯ ಗೆರೆ.ಅದೇ ಹೊತ್ತಿಗೆ ಮಠದ ಅಡುಗೆ ಮನೆಯ ಹಿಂಭಾಗದಲ್ಲಿ, ಪ್ರಸಾದದ ಸಾಲಿನಲ್ಲಿ ನಿಂತಿದ್ದ ತೊಂಬತ್ತರ ಅಜ್ಜನೊಬ್ಬ ತನ್ನ ನಡುಗುವ ಕೈಯಿಂದ ಕಣ್ಣು ಒರೆಸಿಕೊಂಡು ಹೇಳಿದ: "ಯಾಕಪ್ಪಾ ಬೇಜಾರು ಮಾಡ್ಕೋತೀರೀ? ದೇಶದ ರಾಷ್ಟ್ರಪತಿಯೇ ಬಂದು ತಲೆಬಾಗಿ ನಮಸ್ಕಾರ ಮಾಡಿದ ಮಣ್ಣು ಇದು. ನಮ್ಮ ಸ್ವಾಮೀಜಿಗೆ ದೆಹಲಿಯ ಪಟ್ಟ ಬೇಕಾಗಿಲ್ಲ. ಅವರು ಭಾರತ ರತ್ನ ಅಲ್ಲ, ಭಾರತಕ್ಕೇ ಸಿಕ್ಕಿದ ಅಪೂರ್ವದ ರತ್ನ. ಅವರಿಗೆ ಇನ್ನೊಂದು ಬಿರುದು ಯಾಕೆ ಬೇಕು?"ಆ ಅಜ್ಜನ ಮಾತು ಕೇಳಿ ಸುತ್ತಲಿದ್ದ ನೂರಾರು ಜನರ ಗಂಟಲು ಕಟ್ಟಿತು, ಕಣ್ಣಲ್ಲಿ ನೀರು ತುಂಬಿಕೊಂಡಿತು. ಹೌದಲ್ಲವೇ? ತಂತ್ರವೂ ಮಾಡಲಿಲ್ಲ, ಮಂತ್ರವೂ ಮಾಡಲಿಲ್ಲ, ಸಾಧನೆಗಳ ಮೂಲಕ ಗದ್ದುಗೆ ಏರಿದರು ಎಂಬ ಸತ್ಯಕ್ಕೆ ಇನ್ನೊಂದು ಸಾಕ್ಷಿ ಬೇಕೆ?ಅನ್ನ ದಾಸೋಹ – ಹಸಿವಿಗೆ ಜಾತಿ ಇಲ್ಲ ಇವತ್ತು ಪ್ರತಿದಿನ ಮೂರು ಹೊತ್ತು, ಹತ್ತು ಸಾವಿರಕ್ಕೂ ಹೆಚ್ಚು ಹುಡುಗರಿಗೆ ಉಚಿತ ಊಟ. ಜಾತಿ ಕೇಳಿ ಬಡಿಸಲಿಲ್ಲ, ಮತ ಕೇಳಿ ನೀರು ಕೊಡಲಿಲ್ಲ. "ಹೊಟ್ಟೆಪಾಡು ಎಲ್ಲರಿಗೂ ಒಂದೇ, ಹಸಿವಿಗೆ ಜಾತಿ ಇಲ್ಲ" ಎಂದರು. ಒಬ್ಬ ಹಳೆಯ ವಿದ್ಯಾರ್ಥಿ ಕಣ್ಣೀರಲ್ಲಿ ಹೇಳುತ್ತಾನೆ – "ನಾನು ತಂದೆ–ತಾಯಿ ಇಲ್ಲದವನು. ಮೂರು ದಿನ ಊಟ ಇಲ್ಲದೆ ಮಠದ ಬಾಗಿಲಿಗೆ ಬಂದೆ. ಸ್ವಾಮೀಜಿ ತಾವೇ ತುತ್ತು ತೆಗೆದು ನನ್ನ ಬಾಯಿಗೆ ಇಟ್ಟರು. 'ಅಳು ಬೇಡ ಮಗನೇ, ಇನ್ಮುಂದೆ ಇದೇ ನಿನ್ನ ಮನೆ' ಅಂದರು. ಆ ತುತ್ತಿನ ರುಚಿ ಇನ್ನೂ ನನ್ನ ನಾಲಿಗೆ ಮೇಲೆ ಇದೆ".ಅಕ್ಷರ ದಾಸೋಹ – ಕಾಯಕವೇ ಕೈಲಾಸ ಅಲ್ಲಮಪ್ರಭುಗಳು ಹಾಡಿದರು – "ತನುವಿನ ಕಣ್ಣು ಕಾಮನ ಬಾಣ, ಮನದ ಕಣ್ಣು ಜ್ಞಾನದ ಖಣಿ". ಸ್ವಾಮೀಜಿಗಳು ಲಕ್ಷಾಂತರ ಮಕ್ಕಳ ಮನದ ಕಣ್ಣು ತೆರೆಸಿದರು. ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ, ಸಂಸ್ಕೃತ ಪಾಠಶಾಲೆಯಿಂದ ವೈದ್ಯಕೀಯ, ಇಂಜಿನಿಯರಿಂಗ್, ಫಾರ್ಮಸಿ ಕಾಲೇಜಿನವರೆಗೆ – ಒಟ್ಟು 130ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು.ವಿಶೇಷ ಏನೆಂದರೆ, ವಿದ್ಯಾರ್ಥಿಗಳಿಗೆ ವಸತಿಗೆ ಕೇವಲ 250 ರೂ. ಫೀಸು ಮತ್ತು ಕಾಲೇಜು ಫೀಸು 2,000–3,000 ರೂ. ಮಾತ್ರ. ಡೊನೇಷನ್ ಹಾವಳಿ ಇಲ್ಲ. ಇದ್ದದ್ದು ಒಂದೇ ನಿಯಮ – "ಚೆನ್ನಾಗಿ ಓದು, ಒಳ್ಳೆಯ ಮನುಷ್ಯನಾಗು, ಸಮಾಜಕ್ಕೆ ದುಡಿ". ಇಲ್ಲಿಂದ ಓದಿ ಹೋದ ಲಕ್ಷಾಂತರ ಹುಡುಗರು ಇವತ್ತು ದೇಶ–ವಿದೇಶಗಳಲ್ಲಿ ವೈದ್ಯರು, ಇಂಜಿನಿಯರ್‌ಗಳು, ಶಿಕ್ಷಕರು, ಕಲೆಕ್ಟರ್‌ಗಳು, ಸೈನಿಕರು, ವಿಜ್ಞಾನಿಗಳು, ರೈತರು. ಒಬ್ಬೊಬ್ಬರೂ ಒಂದು ದೀಪವಾಗಿ ಸಮಾಜವನ್ನು ಬೆಳಗುತ್ತಿದ್ದಾರೆ.ರಾಷ್ಟ್ರಪತಿಯ ಕಣ್ಣಲ್ಲಿ ಕಂಡ ಮಹಿಮೆ ಮೊನ್ನೆ ಜಯಂತಿಗೆ ಬಂದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಾಮಾನ್ಯ ಮಹಿಳೆಯಲ್ಲ. ಬುಡಕಟ್ಟು ಸಮುದಾಯದಲ್ಲಿ ಹುಟ್ಟಿ, ಬಡತನದ ಬೇಗೆಯಲ್ಲಿ ಬೆಂದು, ಪತಿ ಮತ್ತು ಇಬ್ಬರು ಮಕ್ಕಳನ್ನು ಕಳೆದುಕೊಂಡು, ನೋವನ್ನು ನುಂಗಿ ದೇಶದ ಅತ್ಯುನ್ನತ ಸ್ಥಾನಕ್ಕೇರಿದ ಕೆಚ್ಚೆದೆಯ ತಾಯಿ.ಯೋಚಿಸಿ, ಒಬ್ಬ ಸ್ವಾಮೀಜಿ, ಒಂದು ಮಠ, 78 ವರ್ಷಗಳ ಅವಿರತ ಸೇವೆ – ಲಕ್ಷಾಂತರ ವಿದ್ಯಾರ್ಥಿಗಳಿಗೆ ಹಾಗೂ ಅಂಗವಿಕಲ ಮಕ್ಕಳಿಗೆ ಬದುಕಿನ ದಾರಿ ತೋರಿಸಿದ ಮಹಾಚೇತನ. ಇದು ಯಾವ ಭಾರತ ರತ್ನಕ್ಕಿಂತ ಕಡಿಮೆಯೇ? ಪಾರ್ಲಿಮೆಂಟಿನಲ್ಲಿ ಕೊಡುವ ಒಂದು ಪದಕಕ್ಕಿಂತ, ಕೋಟಿ ಕೋಟಿ ಜನರ ಬದುಕನ್ನು ಬೆಳಗಿದ ಈ ಸಾಧನೆ ದೊಡ್ಡದಲ್ಲವೇ?ಕಣ್ಣೀರಲ್ಲೇ ಅರಳಿದ ಕೋಟಿ ರತ್ನಗಳು ಜಯಂತಿಯ ದಿನ ಮಠದಿಂದ ಹೊರಟ ಜನರ ಬಾಯಲ್ಲಿ ಸ್ವಾಮೀಜಿಯ ಕಥೆಗಳೇ.ಒಬ್ಬ ಆಟೋ ಚಾಲಕ ತನ್ನ ಕಥೆ ಹೇಳಿದ: "ನಾನು ಮೂರು ವರ್ಷದವನಿದ್ದಾಗ ಅಪ್ಪ–ಅಮ್ಮ ಅಪಘಾತದಲ್ಲಿ ತೀರಿಕೊಂಡರು. ಸಂಬಂಧಿಕರು ಬೀದಿಪಾಲು ಮಾಡಿದರು. ಅಳುತ್ತಾ ಮಠದ ಬಾಗಿಲಿಗೆ ಬಂದೆ. ಇವತ್ತು ನಾನು ಆಟೋ ಓಡಿಸುತ್ತಿದ್ದರೂ ನನ್ನ ಮಗಳು ಇಂಜಿನಿಯರಿಂಗ್ ಕೊನೆ ವರ್ಷದಲ್ಲಿದ್ದಾಳೆ. ಸ್ವಾಮೀಜಿ ಇಲ್ಲದಿದ್ದರೆ ನಾನು ಇವತ್ತು ಬೀದಿಯಲ್ಲಿ ಭಿಕ್ಷೆ ಬೇಡುತ್ತಿದ್ದೆ. ನನಗೆ ಭಾರತ ರತ್ನ ಘೋಷಣೆ ಆಗಲಿಲ್ಲ ಅಂತ ಯಾವ ಬೇಜಾರೂ ಇಲ್ಲ. ನನ್ನ ಬದುಕೇ ಅವರಿಗೆ ಸಿಕ್ಕ ದೊಡ್ಡ ಘೋಷಣೆ".ಹಳ್ಳಿಯಿಂದ ಬಂದ ಅಜ್ಜಿಯೊಬ್ಬಳು ತನ್ನ ಮೊಮ್ಮಗನನ್ನು ತೋರಿಸಿ ಬಿಕ್ಕಿ ಬಿಕ್ಕಿ ಅತ್ತಳು: "ಇವನಿಗೆ ಚಿಕ್ಕಂದಿನಿಂದ ಪೋಲಿಯೋ. ಕಾಲು ಊನ. ಯಾವ ಶಾಲೆಯವರೂ ಸೇರಿಸಿಕೊಳ್ಳಲಿಲ್ಲ. 'ಇವನಿಂದ ಏನು ಪ್ರಯೋಜನ' ಅಂದರು. ನಾನು ಅಳುತ್ತಾ ಸ್ವಾಮೀಜಿ ಹತ್ರ ಕರೆದುಕೊಂಡು ಬಂದೆ. ಸ್ವಾಮೀಜಿ ಅವನ ತಲೆ ನೇವರಿಸಿ 'ಯಾರು ಹೇಳಿದ್ದು ಇವನಿಂದ ಪ್ರಯೋಜನ ಇಲ್ಲ ಅಂತ? ಇವನು ನಾಳೆ ದೊಡ್ಡ ಅಧಿಕಾರಿ ಆಗುತ್ತಾನೆ ನೋಡ್ತಾ ಇರಿ' ಅಂದರು. ಆ ಮಾತಿಗೆ ಬೆಲೆ ಕಟ್ಟೋಕಾಗುತ್ತಾ? ಇವತ್ತು ನನ್ನ ಮೊಮ್ಮಗ ಬ್ಯಾಂಕ್ ಮ್ಯಾನೇಜರ್. ತಿಂಗಳಿಗೆ ಲಕ್ಷ ಸಂಬಳ. ಅವನ ಕಾಲು ಊನವಾಗಿರಬಹುದು, ಆದರೆ ಸ್ವಾಮೀಜಿ ಕೊಟ್ಟ ಧೈರ್ಯದಿಂದ ಅವನ ಬದುಕು ಸರಿದಾರಿಗೆ ಬಂತು".ಇಂತಹ ಕೋಟಿ ಕಥೆಗಳು ಸಿದ್ಧಗಂಗೆಯ ಮಣ್ಣಿನಲ್ಲಿ ಹುದುಗಿವೆ. ಒಬ್ಬೊಬ್ಬ ಹುಡುಗನೂ ಒಂದು ರತ್ನ. ಸ್ವಾಮೀಜಿಗಳು ಆ ರತ್ನಗಳಿಗೆ ಸಾಣೆ ಹಿಡಿದರು, ಹೊಳಪು ಕೊಟ್ಟರು, ಲೋಕಕ್ಕೆ ಅರ್ಪಿಸಿದರು.ಸಮಾರೋಪ – ಘೋಷಣೆ ಬೇಡ, ಸ್ಮರಣೆ ಸಾಕು 2019ರ ಜನವರಿ 21. ಆ ಕರಾಳ ದಿನವನ್ನು ಕರ್ನಾಟಕ ಮರೆಯುವುದಿಲ್ಲ. 111 ವರ್ಷದ ಯುಗಪುರುಷರು ಲಿಂಗೈಕ್ಯರಾದರು. ಮರುದಿನ ಅಂತಿಮ ದರ್ಶನಕ್ಕೆ ಹತ್ತು ಲಕ್ಷಕ್ಕೂ ಹೆಚ್ಚು ಜನ ಸಾಲುಗಟ್ಟಿ ನಿಂತರು. ಪ್ರಧಾನಿಯಿಂದ ಹಿಡಿದು ಕೂಲಿಕಾರನವರೆಗೆ ಎಲ್ಲರೂ "ನಮ್ಮ ಅಜ್ಜ ಹೋದರು" ಎಂದು ಗೋಳಾಡಿದರು. ಆ ಕಣ್ಣೀರಿಗೆ ಬೆಲೆ ಕಟ್ಟಲು ಸಾಧ್ಯವಿದೆಯೇ?ಸ್ವಾಮೀಜಿಗಳು ಇವತ್ತು ದೈಹಿಕವಾಗಿ ನಮ್ಮೊಂದಿಗಿಲ್ಲ. ಆದರೆ ಅವರು ಹಚ್ಚಿಟ್ಟ ತ್ರಿವಿಧ ದಾಸೋಹದ ದೀಪ ಇಂದಿಗೂ ಆರಿಲ್ಲ, ಆರುವುದೂ ಇಲ್ಲ. ಶ್ರೀ ಸಿದ್ಧಲಿಂಗ ಸ್ವಾಮೀಜಿಗಳ ನೇತೃತ್ವದಲ್ಲಿ ಈಗಲೂ ದಿನಕ್ಕೆ ಹತ್ತು ಸಾವಿರ ಮಕ್ಕಳಿಗೆ ಊಟ, ವಸತಿ, ವಿದ್ಯೆ ನಿರಂತರವಾಗಿ ನಡೆಯುತ್ತಿದೆ.ಹಾಗಾಗಿ ಇನ್ಮುಂದೆ ಯಾರೂ ಕೇಳಬೇಡಿ "ಭಾರತ ರತ್ನ ಯಾಕೆ ಕೊಡಲಿಲ್ಲ?" ಎಂದು. ಬದಲಿಗೆ ಎದೆತಟ್ಟಿ, ಹೆಮ್ಮೆಯಿಂದ ಸಾರಿ – "ಘೋಷಣೆ ಬೇಡ, ಗೌರವವೇ ಸಾಕು. ಪಟ್ಟ ಬೇಡ, ಪ್ರೀತಿಯೇ ಸಾಕು. ಪದಕ ಬೇಡ, ಕಣ್ಣೀರೇ ಸಾಕು".ಯಾಕೆಂದರೆ ನಮ್ಮ ನಡೆದಾಡುವ ದೇವರು ಭಾರತ ರತ್ನ ಅಲ್ಲ, ಅವರೇ ಭಾರತದ ಎದೆಯ ರತ್ನ, ಕೋಟಿ ಕಣ್ಣುಗಳ ಕಣ್ಣಮಣಿ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಂದು ತಲೆಬಾಗಿ ನಮಸ್ಕರಿಸಿದ ಮೇಲೆ, ಇನ್ನೊಂದು ಮುದ್ರೆಯ ಅವಶ್ಯಕತೆ ಇದೆಯೇ?ಕೊನೆಯದಾಗಿ ಒಂದೇ ಮಾತು: ತಂತ್ರಗಾರಿಕೆ ಮಾಡಲಿಲ್ಲ, ಪವಾಡದ ಮಂತ್ರ ಜಪಿಸಲಿಲ್ಲ, ಸುಳ್ಳಿನ ಅಬ್ಬರ ಮಾಡಲಿಲ್ಲ. ಇದ್ದದ್ದು ಒಂದೇ – ನೊಂದ ಜೀವಗಳ ಕಣ್ಣೀರು ಒರೆಸಿದ ಕೈಗಳು, ಹಸಿದ ಹೊಟ್ಟೆಗಳಿಗೆ ತುತ್ತು ಇಕ್ಕಿದ ಕೈಗಳು, ಅಜ್ಞಾನದ ಕತ್ತಲೆಯಲ್ಲಿ ಅಕ್ಷರದ ಹಣತೆ ಹಚ್ಚಿದ ಕೈಗಳು.ಆ ಕೈಗಳಿಗೆ ನಾವು ಶಿರಬಾಗಿ ನಮಸ್ಕರಿಸೋಣ. ಆ ಕಣ್ಣುಗಳ ಕರುಣೆಗೆ ನಾವು ಕರಗೋಣ. ಆ ಹೃದಯದ ವಿಶಾಲತೆಯನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳೋಣ. ಅದೇ ಅವರಿಗೆ ನಾವು ಸಲ್ಲಿಸುವ ನಿಜವಾದ ಜಯಂತಿಯ ನಮನ. ಅದೇ ಅವರಿಗೆ ನಾವು ಕಟ್ಟುವ ಶಾಶ್ವತ ಗದ್ದುಗೆ. ಅದೇ ನಿಜವಾದ ಭಾರತ ರತ್ನ.







**2012 ರಲ್ಲಿ ಸ್ವಾಮೀಜಿಗಳ ಒಂದು ಸಹಿ ನನ್ನ ಬದುಕಿನ ದಿಕ್ಕನ್ನೇ ಬದಲಾಯಿಸಿತು. ಸಿದ್ಧಗಂಗೆಯ ಅನ್ನದಾಸೋಹದ ನೆರಳಲ್ಲಿ ನಿಂತು B.Sc (CBZ) ಪದವಿ ಮುಗಿಸಿದೆ. ಅಲ್ಲಿಗೆ ನಿಲ್ಲದೆ, ಅವರ ಆಶೀರ್ವಾದದ ದಾರಿಯಲ್ಲಿ ಒ.ಖಥಿ ಜೀವರಸಾಯನಶಾಸ್ತ್ರ ಓದಿದೆ. ಇವತ್ತು ಅದೇ ಸಹಿಯ ಬಲದಿಂದ PhD ಸಂಶೋಧನೆ ಮಾಡುತ್ತಿದ್ದೇನೆ. ಅಕ್ಷರ ಕಲಿಸಿದ ಆ ಕೈಗಳಿಗೆ, ಬದುಕು ಕೊಟ್ಟ ಆ ಸಹಿಗೆ ನನ್ನ ಕೋಟಿ ನಮನಗಳು .**



**ರಾಜೇಶ್**
**ಉಪನ್ಯಾಸಕರು, ಸನ್‌ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಸಿಂಧನೂರು.**
**ಶ್ರೀ ಸಿದ್ಧಗಂಗಾ ಮಠದ ಹಳೆ ವಿದ್ಯಾರ್ಥಿ**

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಐಟಿಐ ಪ್ಲಂಬರ್

ಐಟಿಐ ಪ್ಲಂಬರ್ ಕೋರ್ಸ್ ವಿವರಗಳು ಗೃಹೋಪಯೋಗಿ ಉಪಕರಣಗಳ ದುರಸ್ತಿ, ಅಳವಡಿಕೆ, ನಿರ್ವಹಣೆ, ಪರೀಕ್ಷೆ, ಸಮೀಕ್ಷೆ, ಅಳವಡಿಕೆ, ನೀರು ಸರಬರಾಜು ಉಪಕರಣಗಳು, ಕಂಪನಿ, ಕೃಷಿ ಮತ್ತು ಇನ್ನೂ ಅನೇಕ ವಿಷಯಗಳಲ್ಲಿ ನೀವು ಆಸಕ್ತಿ ಹೊಂದಿದ್ದರೆ ನೀವು ಐಟಿಐ ಪ್ಲಂಬರ್ ಕೋರ್ಸ್‌ಗೆ ಸೇರಬಹುದು. ಐಟಿಐ ಪ್ಲಂಬರ್ ಅರ್ಹತೆ ನೀವು ಕನಿಷ್ಠ ವಿದ್ಯಾರ್ಹತೆ 10 ನೇ ತರಗತಿ ಉತ್ತೀರ್ಣರಾಗಿರಬೇಕು. ಐಟಿಐ ಪ್ಲಂಬರ್ ಕೋರ್ಸ್ ಅವಧಿ ಇದು ಸುಮಾರು 1 ವರ್ಷದ (2 ಸೆಮಿಸ್ಟರ್‌ಗಳು) ಕೋರ್ಸ್ ಆಗಿದೆ. ಐಟಿಐ ಪ್ಲಂಬರ್ ಕೋರ್ಸ್ ಶುಲ್ಕಗಳು ಸಂಸ್ಥೆ ಅಥ–'ವಾ ರಾಜ್ಯ (ಸರ್ಕಾರ) ಪ್ರಕಾರ ರೂ. 1500 – 3000 ಸಂಸ್ಥೆ (ಖಾಸಗಿ) ಪ್ರಕಾರ ರೂ. 10000 – 30000 ಐಟಿಐ ಪ್ಲಂಬರ್ ಕೋರ್ಸ್‌ನ ಪ್ರಮಾಣಪತ್ರಗಳು NCVT – ರಾಷ್ಟ್ರೀಯ ಮಂಡಳಿ ವೃತ್ತಿಪರ ತರಬೇತಿ (ಶಿಫಾರಸು ಮಾಡಲಾಗಿದೆ) SCVT – ರಾಜ್ಯ ಮಂಡಳಿ ವೃತ್ತಿಪರ ತರಬೇತಿ ಕೋರ್ಸ್ ಪ್ರಕಾರಗಳು ವೃತ್ತಿಪರ ತರಬೇತಿ ಕೋರ್ಸ್ ಐಟಿಐ ಪ್ಲಂಬರ್ ವಿಷಯಗಳು ಮತ್ತು ಪಠ್ಯಕ್ರಮ ವ್ಯಾಪಾರ ಸಿದ್ಧಾಂತ ವ್ಯಾಪಾರ ಪ್ರಾಯೋಗಿಕ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಎಂಜಿನಿಯರಿಂಗ್ ರೇಖಾಚಿತ್ರ ಉದ್ಯೋಗಾರ್ಹತಾ ಕೌಶಲ್ಯಗಳು ಪ್ಲಂಬರ್‌ನ ಕೌಶಲ್ಯಗಳು ಒಬ್ಬ ಪ್ಲಂಬರ್ ನೀರು ಸರಬರಾಜು ಘಟಕಗಳು, ಅಸ್ತಿತ್ವದಲ್ಲಿರುವ ಒಳಚರಂಡಿ ವ್ಯವಸ್ಥೆಯನ್ನು ಸ್ಥಾಪಿಸುವ, ದುರಸ್ತಿ ಮಾಡುವ ಮತ್ತು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ ಮತ್ತು ಅವರು ನೀರು ಸರಬರಾಜು ಉಪಕರಣಗಳು ಮತ್ತು ಪರಿಕರಗಳ ಜ್ಞಾನವನ್ನು ಹೊಂದಿರುತ್ತಾರೆ.

## ಶಿಕ್ಷಣದಲ್ಲಿ "ನಾಟಕ ಮತ್ತು ಕಲೆ" ಪ್ರಾಯೋಗಿಕ ತರಬೇತಿ ಕಾರ್ಯಕ್ರಮ ಯಶಸ್ವಿ

◆ ನೈಜ್ಯ ದೆಸೆ ನ್ಯೂಸ್

ಸಿಂಧನೂರು:ಆದಿ ಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ರಾಯಚೂರು ಅಧೀನದಲ್ಲಿರುವ ಶ್ರೀ ಕನಕದಾಸ ಶಿಕ್ಷಣ ಮಹಾವಿದ್ಯಾಲಯ ಸಿಂಧನೂರಿನಲ್ಲಿ ಶಿಕ್ಷಣದಲ್ಲಿ "ನಾಟಕ ಮತ್ತು ಕಲೆ" ಶೀರ್ಷಿಕೆಯಡಿ ಆಯೋಜಿಸಲಾದ ಪ್ರಾಯೋಗಿಕ ತರಬೇತಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು ಶನಿವಾರ ನಡೆದ ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಅಂಶಗಳನ್ನು ಒಳಗೊಂಡ ವಿವಿಧ ನಾಟಕಗಳನ್ನು ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು. ವಿದ್ಯಾರ್ಥಿಗಳ ಅಭಿನಯ ಕೌಶಲ್ಯ, ವೇದಿಕೆ ನಿರ್ವಹಣೆ ಹಾಗೂ ಸಮಾಜಮುಖಿ ಸಂದೇಶಗಳ ಪ್ರದರ್ಶನ ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿತ್ತು. ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳು ಬಾಲ್ಯ ವಿವಾಹದ ದುಷ್ಪರಿಣಾಮಗಳು ಮತ್ತು ಹೆಣ್ಣು ಭ್ರೂಣ ಹತ್ಯೆಯ ತಡೆ, ಪರಿಸರ ಸಂರಕ್ಷಣೆ




ಹಾಗೂ ಪೌರಾಣಿಕ ನಾಟಕಗಳಾದ ಮಹಾಭಾರತ ಮತ್ತು ಮಹಿಳಾ ಸಬಲೀಕರಣದ ಮಹತ್ವವನ್ನು ಮನಮುಟ್ಟುವ ರೀತಿಯಲ್ಲಿ ಬಿಂಬಿಸಿದೆ ಈ ನಾಟಕಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಒ ದೊಡ್ಡ ಬಸವರಾಜ ಆಡಳಿತಾಧಿಕಾರಿಗಳು ಶ್ರೀ ಕನಕದಾಸ ಶಿಕ್ಷಣ ಸಂಸ್ಥೆ ಸಿಂಧನೂರು ಮಾತನಾಡಿ ನಾಟಕ ಮತ್ತು ಕಲಾ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ,ಆತ್ಮವಿಶ್ವಾಸ ಹಾಗೂ ಅಡಗಿರುವ ಪ್ರತಿಭೆಗಳನ್ನು ಹೊರ ತರುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಹೇಳಿದರು. ಶಿಕ್ಷಣದ ಜೊತೆಗೆ ಕಲೆ ಮತ್ತು ಸಂಸ್ಕೃತಿಯ ಅರಿವು ,ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮವನ್ನು ನಿಕಟ ಪೂರ್ವ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಹಾಗೂ ಹಾಸ್ಯ ಕಲಾವಿದರಾದ ವೆಂಕನಗೌಡ ವಟಗಲ್ ಉದ್ಘಾಟಿಸಿದರು. ಈ ವೇಳೆ ಅವರು ವಿದ್ಯಾರ್ಥಿಗಳು ಕಲೆ ಮತ್ತು ನಾಟಕಗಳ ಮೂಲಕ ಸಮಾಜಕ್ಕೆ ಸಕಾರಾತ್ಮಕ ಸಂದೇಶಗಳನ್ನು ತಲುಪಿಸುವ ಕೆಲಸ ಮಾಡಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರು,ಆಡಳಿತ ವರ್ಗದವರು, ಉಪನ್ಯಾಸವೃಂದದವರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.



## ಬಾಗಲವಾಡ ಬಳಿ ಎಡದಂಡೆ ಕಾಲುವೆ ಸೇತುವೆ ಶಿಥಿಲ : ವಾಹನ ಸವಾರರಿಗೆ ಆತಂಕ

**ಕವಿತಾಳ ಹತ್ತಿರದ ಲಕ್ಷ್ಮೀ ಕ್ಯಾಂಪ್ ಬಳಿ ತುಂಗಭದ್ರಾ ಎಡದಂಡೆ ಕಾಲುವೆಯ ಸೇತುವೆ ಶಿಥಿಲಗೊಂಡಿರುವುದು.**

◆ ನೈಜ್ಯ ದೆಸೆ ನ್ಯೂಸ್

ಕವಿತಾಳ –: ಸಮೀಪದ ಬಾಗಲವಾಡ ಗ್ರಾಮದ ಲಕ್ಷ್ಮೀಕ್ಯಾಂಪ್ ಬಳಿ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ಅಡ್ಡವಾಗಿ ನಿರ್ಮಿಸಿದ ಸೇತುವೆ ಶಿಥಿಲಗೊಂಡಿದ್ದು ವಾಹನ ಸವಾರರು ಜೀವ ಭಯದಲ್ಲಿ ಸಂಚರಿಸುವಂತಾಗಿದ.ಕಾಲುವೆ ನಿರ್ಮಾಣ ಸಂದರ್ಭ ನಾಲ್ಕು ದಶಕಗಳ ಹಿಂದೆ ನಿರ್ಮಿಸಿದ ಸೇತುವೆಯ ಕಾಂಕ್ರೀಟ್ ಕಾಲಂಗಳು ಬಿರುಕು ಬಿಟ್ಟು ಕಬ್ಬಿಣದ ಸರಳುಗಳು ಕಾಣುತ್ತಿವೆ, ಆಸರೆ ಗೋಡೆಗಳು ಬಿರುಕು ಬಿಟ್ಟಿವೆ ಮತ್ತು ಚಾವಣಿ ಶಿಥಿಲಗೊಂಡಿದ್ದು ಕುಸಿಯುವ ಆತಂಕ ಉಂಟಾಗಿದೆ.'ಕವಿತಾಳ ಮಾನ್ವಿ ಸಂಪರ್ಕಿಸುವ ಪ್ರಮುಖ ರಸ್ತೆಯಾಗಿದ್ದು ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ, ಬತ್ತ ಮತ್ತಿತರ ಕೃಷಿ ಉತ್ಪನ್ನ ಸಾಗಿಸುವ ಭಾರಿ



ಗಾತ್ರದ ಲಾರಿಗಳು, ಟ್ರ್ಯಾಕ್ಟರ್, ಬಸ್, ಶಾಲಾ ವಾಹನ ಸೇರಿದಂತೆ ಬೈಕ್ ಸವಾರರು ಸಂಚರಿಸುತ್ತಾರೆ ಸೇತುವೆ ಶಿಥಿಲಗೊಂಡ ಪರಿಣಾಮ ಆತಂಕದಲ್ಲಿ ಸಂಚರಿಸುವಂತಾಗಿದೆ' ಎಂದು ಬಾಗಲವಾಡದ ಶಿವಕುಮಾರ ನಾಯಕ ಆರೋಪಿಸಿದರು.'ಸೇತುವೆ ಕಿರಿದಾಗಿದ್ದು ಇತ್ತೀಚೆಗೆ ಸಂಚಾರ ದಟ್ಟಣೆ ಹೆಚ್ಚುತ್ತಿರುವ ಪರಿಣಾಮ ಎದುರಿಗೆ ಬರುವ ಹಾಹನಗಳಿಗೆ ರಸ್ತೆ ಬಿಟ್ಟುಕೊಡಲು ಸಾಧ್ಯವಾಗದೆ ತೊಂದರೆಯಾಗುತ್ತಿದೆ, ವಾಹನ ಚಾಲಕರು ಅವರಸ ಮಾಡಿದಲ್ಲಿ ಮತ್ತು ಸ್ವಲ್ಪ ಆಯ ತಪ್ಪಿದರೂ ದುರಂತ ಸಂಭವಿಸುವಂತಾಗಿದೆ. ಈಗಿನ ವಾಹನ ಸಂಚಾರ ದಟ್ಟಣೆ ಆಧರಿಸಿ ಹೊಸದಾಗಿ ಸೇತುವೆ ನಿರ್ಮಾಣ ಮಾಡುವುದು ತುರ್ತು ಅಗತ್ಯ' ಎಂದು ರವಿಕುಮಾರ ನಾಯಕ ಮತ್ತು ಶಿವರಾಜ ನಾಯಕ ಒತ್ತಾಯಿಸಿದರು. 'ಈ ಬಗ್ಗೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದ್ದರೂ ಪರಿಶೀಲನೆ ಮಾಡಿಲ್ಲ, ಸೇತುವೆ ಶಿಥಿಲಗೊಂಡ ಬಗ್ಗೆ ಎಚ್ಚರಿಕೆ ಫಲಕಗಳನ್ನು ಅಳವಡಿಸಿ ತಾತ್ಕಾಲಿಕ ಸುರಕ್ಷತಾ ಕ್ರಮ ಕೈಗೊಳ್ಳಬೇಕು' ಎಂದು ಗ್ರಾಮದ ಮಲ್ಲನಗೌಡ ನಾಯಕ ಆಗ್ರಹಿಸಿದರು.ಈ ಬಗ್ಗೆ ಜಲ ಜಲ ಸಂಪನ್ಮೂಲ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ, ದುರಂತ ಸಂಭವಿಸುವ ಮುಂಚೆ ಅಧಿಕಾ ಎಚ್ಚೆತ್ತುಕೊಳ್ಳಬೇಕು.

## ಭಾವಿ ಶಿಕ್ಷಕರು ಕ್ರಿಯಾಶೀಲತೆ ರೂಢಿಸಿಕೊಳ್ಳಲಿ

◆ ನೈಜ್ಯ ದೆಸೆ ನ್ಯೂಸ್



ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುವ ಜವಾಬ್ದಾರಿ ಭಾವಿ ಶಿಕ್ಷಕರ ಮೇಲಿದ್ದು, ಆವಿಷ್ಕಾರಗಳಿಗೆ ಪ್ರೇರಣೆ ನೀಡುವಂತೆ ಪ್ರಾಚಾರ್ಯ ಡಾ.ಕೆ.ಸಿ.ಕುಲ್ಕರ್ಣಿ ಹೇಳಿದರು. ನಗರದ ಟಿಎಂಎಇಎ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ವಿಜ್ಞಾನ ಮತ್ತು ಗಣಿತ ಕ್ಲಬ್ ಉದ್ಘಾಟಿಸಿ ಮಾತನಾಡಿದರು.ಕಲಿಕೆಯ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಧಾರೆ ಎರೆಯುವುದರ ಜತೆಗೆ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವತ್ತ ಕ್ರಿಯಾಶೀಲತೆ ರೂಢಿಸಿಕೊಳ್ಳಲು ಸಲಹೆ ನೀಡಿದರು.ಗಣಿತ ವಿಭಾಗದ ಮುಖ್ಯಸ್ಥ ಕೆ.ಎಂ.ಶಿವಪ್ರಕಾಶ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಗಣಿತ ಎಲ್ಲ ರಂಗಗಳಲ್ಲಿ ಹಾಸು ಹೊಕ್ಕಾಗಿದ್ದು, ತರ್ಕದ ರೂಪದಲ್ಲಿ ಬಳಸುವುದು ಪ್ರತಿಯೊಬ್ಬ ಭಾವಿ ಶಿಕ್ಷಕರ ಗುರಿಯಾಗಿರಲಿ ಎಂದರು.ನಂತರ ಪ್ರತಿಜ್ಞಾ ವಿಧಿ ಬೋಧಿಸಿ, ಗಣಿತ ಕಲಿಕೆ ಮಹತ್ವ ಮತ್ತು ದೈನಂದಿನ ಜೀವನದಲ್ಲಿ ಗಣಿತದ ಪ್ರಾಮುಖ್ಯತೆ ಬಗ್ಗೆ ಮಾಹಿತಿ ನೀಡಿದರು. ವಿಜ್ಞಾನ ವೈಭವ ಮತ್ತು ಗಣಿತ ಗಮ್ಮತ್ತು ಪರಿಕಲ್ಪನೆಯಡಿಯಲ್ಲಿ ಪ್ರಶಿಕ್ಷಣಾರ್ಥಿಗಳು ವಿವಿಧ ಚಟುವಟಿಕೆಗಳನ್ನು ಪ್ರದರ್ಶಿಸಿದರು. ಸಹ ಪ್ರಾಧ್ಯಾಪಕರಾದ ಎಚ್.ಎಂ.ವಿರೂಪಾಕ್ಷಸ್ವಾಮಿ, ಡಾ.ಅರುಣಕುಮಾರ, ಡಾ.ರಮೇಶ ಸಿದ್ದಪ್ಪ, ಜಯರಾಂ ಮರಡಿತೋಟ, ಎಂ.ರುದ್ರೇಶ ಆರಾಳ್, ಶಿವರಾಜ ಪಾಟೀಲ್ ಇತರರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಕಿಂಗ್ಸ್ ಆಫ್ ಕಂಪ್ಲಿ ತಂಡಕ್ಕೆ ಕೆಪಿಎಲ್ ಕಿರೀಟ ಕ್ರೀಡೆಯಲ್ಲಿ ಕ್ರೀಡಾ ಮನೋಭಾವ ಮುಖ್ಯ : ಹೊಸಕೋಟೆ ಜಗದೀಶ

◆ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಕ್ರೀಡೆಯಲ್ಲಿ ಸೋಲು ಗೆಲುವು ಸಾಮಾನ್ಯ. ಇಂತಹ ಕ್ರೀಡೆಯಲ್ಲಿ ಭಾಗವಹಿಸಿ ಕ್ರೀಡಾ ಮನೋಭಾವ ಮೆರೆಯಬೇಕು ಎಂದು ವೀರಶೈವ ಲಿಂಗಾಯತ ಮಹಾ ವೇದಿಕೆಯ ಜಿಲ್ಲಾಧ್ಯಕ್ಷ ಹೊಸಕೋಟೆ ಜಗದೀಶ ಹೇಳಿದರು.ಪಟ್ಟಣದ ಯಲ್ಲಮ್ಮಕ್ಯಾಂಪ್ ನಲ್ಲಿರುವ ಕ್ರೀಡಾ ಮೈದಾನದಲ್ಲಿ ಕಂಪ್ಲಿ ಪ್ರೀಮಿಯರ್ ಲೀಗ್(ಕೆಪಿಎಲ್)ನ ಕ್ರಿಕೇಟ್ ಫೈನಲ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಮೊದಲ ಸ್ಥಾನ ಪಡೆದ ತಂಡಕ್ಕೆ ಆಕರ್ಷಕ ಕಪ್ ವಿತರಿಸಿ ಮಾತನಾಡಿ, ಕ್ರೀಡೆ ಮತ್ತು ಶಾಲೆಯಲ್ಲಿ ಯಾವುದೇ ಜಾತಿ ಬೇಧ ಬರುವುದಿಲ್ಲ. ನಮ್ಮ ಕಂಪ್ಲಿ ನಮ್ಮ ಕ್ರೀಡೆ ಎಂಬ ಸಂಘಟನೆ ರಚಿಸಿ, ಹೋರಾಟದ ಮೂಲಕ ತಾಲೂಕು ಕ್ರೀಡಾಂಗಣಕ್ಕೆ ಒತ್ತಾಯಿಸಬೇಕಾಗಿದೆ. ಹಠದಿಂದ ಮಾತ್ರ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು. ಕ್ರೀಡೆ ಕಂಪ್ಲಿಗೆ ಸೀಮಿತವಾಗಬಾರದು, ಅದನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟಕ್ಕೆ ಹೋಗಬೇಕು. ಕ್ರೀಡಾಪಟುಗಳಿಗೆ ಉತ್ತೇಜನ ನೀಡಿದಾಗ ಮಾತ್ರ ದೊಡ್ಡ ಮಟ್ಟದಲ್ಲಿ ಬೆಳೆಯಲು ಸಾಧ್ಯ ಎಂದರು.ಪ್ರಥಮ ವಿಜೇತ ರಾಜು ಮಾಲಿಕತ್ವದ ಸತೀಶ್ ರೆಡ್ಡಿ ನಾಯಕತ್ವದ ಕಿಂಗ್ಸ್ ಆಫ್ ಕಂಪ್ಲಿ ತಂಡವೂ ಎಬಿ ಗ್ರೂಪ್‌ನ ಅಬುಬಯ್ ಪ್ರಾಯೋಜಕತ್ವದಲ್ಲಿ 60 ಸಾವಿರ ನಗದು ಬಹುಮಾನ ಮತ್ತು ಆಕರ್ಷಕ ಟ್ರೋಫಿ ಪಡೆದುಕೊಂಡಿತು. ರನ್ನರ್ ಆಫ್ ತಂಡವಾಗಿ ಹೊರ ಹೊಮ್ಮಿದ ಡೇರಿಂಗ್ ಡೆವಿಲ್ಸ್ ತಂಡವೂ ವೀರಶೈವ ಲಿಂಗಾಯತ ಮಹಾ ವೇದಿಕೆಯ ಜಿಲ್ಲಾಧ್ಯಕ್ಷ ಹೊಸಕೋಟೆ ಜಗದೀಶ ಪ್ರಾಯೋಜಕತ್ವದಲ್ಲಿ 30 ಸಾವಿರ ನಗದು ಬಹುಮಾನದೊಂದಿಗೆ ಆಕರ್ಷಕ ಕಪ್ ತನ್ನದಾಗಿಸಿಕೊಂಡಿತು. ಕಿಂಗ್ಸ್ ಆಫ್ ಕಂಪ್ಲಿ ತಂಡದ ಪಂಪಾ ಪಂದ್ಯ ಪುರುಷೋತ್ತಮ



ಪ್ರಶಸ್ತಿ ಪಡೆದರು. ರಾಮಸಾಗರ ತಿಪ್ಪಯ್ಯ ಬೆಸ್ಟ್ ಬ್ಯಾಟ್ಸ್ಮನ್ ಹಾಗೂ ಗೋಲ್ಡ್ ನಾಗ ಬೆಸ್ಟ್ ಬೌಲರ್ ಆಗಿ ಹೊರ ಹೊಮ್ಮಿದರು. ಬೆಂಗಳೂರಿನ ಕ್ರೀಡಾ ನಿರೂಪಕ ಮಾಲಾ ಇವರು ಕ್ರೀಡಾ ನಿರೂಪಣೆ ಅಚ್ಚುಕಟ್ಟಾಗಿ ನಿರ್ವಹಿಸಿದರು.ಈ ಸಂದರ್ಭದಲ್ಲಿ ಕರವೇ ತಾಲೂಕು ಅಧ್ಯಕ್ಷ ಬಳೇ ಮಲ್ಲಿಕಾರ್ಜುನ, ಮುಖಂಡರಾದ ಎಂ.ರಾಜೇಶ, ರಮೇಶ ಶಿವಪೂರ, ಹಂಪಾರೆಡ್ಡಿ, ಕ್ರೀಡಾ ಆಯೋಜಕರಾದ ಮೂಕಿ, ನೂರ್ ಮುಕ್ತಾರ್ ಬಾಗ್ಲಿ, ರಾಜ ಎದುರು, ರಮೇಶ, ಗೋಲ್ಡ್ ನಾಗ ಹಾಗೂ ಕ್ರೀಡಾಪಟುಗಳು ಹಾಗೂ ಕ್ರೀಡಾಭಿಮಾನಿಗಳು ಪಾಲ್ಗೊಂಡಿದ್ದರು.

# ಗಿಡ ಕಂಟಿ, ಜಲಸಸ್ಯದಿಂದ ಮಾರೆಮಾಚಿದ ಬುಕ್ಕಸಾಗರ ತುರ್ತು ಕಾಲುವೆ : ಮುಂಗಾರು ಹಂಗಾಮಿನ ಬೆಳೆಗೆ ನೀರು ಸಿಗದ ಆತಂಕ : ನೀರಾವರಿ ಇಲಾಖೆಯ ದಿವ್ಯ ನಿರ್ಲಕ್ಷ್ಯಕ್ಕೆ ರೈತರ ಆಕ್ರೋಶ

◆ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಸರ್ಕಾರ ರೈತರ ನೀರಾವರಿಯಾಗಿ ಸಾಕಷ್ಟು ಅನುದಾನಗಳನ್ನು ನೀಡುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ನೀರಾವರಿ ಇಲಾಖೆಯ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯಕ್ಕೆ ನೀರಿಲ್ಲದೇ ಗಿಡಗಂಟಿ, ಜಲಸಸ್ಯಗಳಿಂದ ರೈತರ ಕಾಲುವೆಗಳು ಮಾಯವಾಗುವಂತಾಗಿದೆ. ತುಂಗಭದ್ರ ಬಲದಂಡೆ ಭಾಗದಲ್ಲಿ ಹಾದು ಹೋಗಿರುವ ಕಾಲುವೆಗಳ ನೀರಿನಿಂದಾಗಿ ರೈತರು ನಾನಾ ಬೆಳೆಗಳನ್ನು ಬೆಳೆಯುವ ಮೂಲಕ ಬದುಕು ರೂಪಿಸಿಕೊಳ್ಳುತ್ತಾ ಬಂದಿದೆ. ಆದರೆ, ಇಲ್ಲಿನ ರೈತರ ಜೀನವಾಡಿ ಎಂಬಂತಿರುವ ಕಾಲುವೆಗಳ ದುರಸ್ಥಿ ನೋಡಿದರೆ, ರೈತರು ಬದುಕು ಎಷ್ಟರ ಮಟ್ಟಿಗೆ ಕಷ್ಟದಲ್ಲಿ ನಡೆಯುತ್ತದೆ ಎಂಬುದು ಗೋಚರವಾಗುತ್ತದೆ.ಸಮೀಪದ ಬುಕ್ಕಸಾಗರ ಸೇರಿದಂತೆ ವ್ಯಾಪ್ತಿಯ ವೆಂಕಟಾಪುರ ಮತ್ತು ಗ್ರಾಮಗಳ ಸಾಕಷ್ಟು ರೈತರು ಭೂಮಿ ತಾಯಿಯನ್ನೇ ನಂಬಿ ಬದುಕು ಕಟ್ಟಿಕೊಂಡಿದ್ದಾರೆ. ಬಸವ, ರಾಮ ಮತ್ತು ಕಮಲಾಪುರ ಕೆರೆಯಿಂದ ಕಾಲುವೆ ಮೂಲಕ ಉದ್ದಾನ ವೀರಭದ್ರ ದೇವಸ್ಥಾನ ಬಳಿಯಲ್ಲಿರುವ ತುರ್ತು ಕಾಲುವೆಗೆ ನೀರು ಹರಿದು ಬರುತ್ತದೆ. ಇಲ್ಲಿನ ತುರ್ತು ಕಾಲುವೆ ವ್ಯಾಪ್ತಿಯಲ್ಲಿ ಸುಮಾರು 3 ಸಾವಿರಕ್ಕೂ ಹೆಚ್ಚು ರೈತರ ಜಮೀನುಗಳಿವೆ. ಇಲ್ಲಿನ ರೈತರಿಗೆ ತುರ್ತು ಕಾಲುವೆಯ ನೀರೇ ಆಧಾರಸ್ತಂಬವಾಗಿದೆ. ನೀರಿನಿಂದ ಬೆಳೆ, ಬೆಳೆಯಿಂದ ನೀರಲ್ಲ ಎಂಬಂತೆ ಈ ಭಾಗದಲ್ಲಿ ಬಹುತೇಕವಾಗಿ ರೈತರು ತುರ್ತು ಕಾಲುವೆಯ ನೀರಿನ ಆಧಾರದ ಮೇಲೆ ಬೆಳೆಗಳನ್ನು ಬೆಳೆಯುವದುಂಟು. ಆದರೆ, ಕಳೆದ ಮುಂಗಾರು ಹಂಗಾಮಿನನಿಂದ ತುರ್ತು ಕಾಲುವೆಯ ರೈತರ ಬದುಕು ಸಂಕಷ್ಟದಲ್ಲಿ ದೂಡುವಂತಾಗಿದೆ. ಇಲ್ಲಿನ ಕಾಲುವೆ ಜಲಸಸ್ಯ ಮತ್ತು ಗಿಡ ಕಂಟಿಗಳಿಂದ ಮುಚ್ಚಿದೆ.





ಎಲ್ಲಿದೇ ಕಾಲುವೆ ಎಂಬ ಹುಡುಕಾಟ ನಡೆದಿದೆ. ಇಲ್ಲಿನ ಉದ್ದಾನ ವೀರಭದ್ರ ದೇವಸ್ಥಾನ ಬಳಿಯಲ್ಲಿರುವ ತುರ್ತು ಕಾಲುವೆಯ ನಾಲ್ಕು ಗೇಟ್ ಗಳು ಸಂಪೂರ್ಣವಾಗಿ ತುಕ್ಕು ಹಿಡಿದು ಹಾಳಾಗಿವೆ. 1 ಕಿ.ಮೀ.ಯಿಂದ 18 ಕಿ.ಮೀ.ವರೆಗೆ ಕಾಲುವೆ ಹಾದು ಹೋಗಿದೆ. ಇದರಲ್ಲಿ 3 ಕಿ.ಮೀ 8 ಕಿ.ಮೀ ವರೆಗೆ ಕಾಮಗಾರಿ ನಡೆದಿಲ್ಲ. ಇದರಿಂದ ನೀರು ಸರಾಗವಾಗಿ ಹರಿಯುತ್ತಿಲ್ಲ. ಮತ್ತು ಮುಂದಕ್ಕೆ ನೀರು ಹೋಗದ ಪರಿಣಾಮ ಕಾಲುವೆ ಸಂಪೂರ್ಣವಾಗಿ ಹೂಳು ಮತ್ತು ಜಲಸಸ್ಯದಿಂದ ಕಾಣ್ಮರೆಯಾಗಿದೆ.ಇಲ್ಲಿನ ಬುಕ್ಕಸಾಗರ ವ್ಯಾಪ್ತಿಯ ತುರ್ತು ಕಾಲುವೆ ವ್ಯಾಪ್ತಿಯಲ್ಲಿ ಸಾವಿರಾರು ಎಕರೆಯಷ್ಟು ರೈತರ ಜಮೀನುಗಳಿವೆ. ಕಳೆದ ಬಾರಿಯ ಮುಂಗಾರಿನ ಹಂಗಾಮಿನಲ್ಲಿ ತುಂಗಭದ್ರ ಜಲಾಶಯದ 19ನೇ ಕ್ರಸ್ಟ್ ಗೇಟ್ ಕಿತ್ತಿ ಹೋಗಿತ್ತು. ಇದರಿಂದ ಮೊದಲ ಬೆಳೆ ತೆಗೆದುಕೊಳ್ಳಲು ರೈತರಲ್ಲಿ ಅನುಮಾನ ಕಾಡಿದ ನಡುವೆಯೂ ತಾತ್ಕಾಲಿಕವಾಗಿ ಗೇಟ್ ದುರಸ್ಥಿಯಿಂದಾಗಿ ಮೊದಲ ಫಸಲು ತೆಗೆದುಕೊಂಡದರು. ಆದರೆ, ಹೊಸ ಗೇಟ್ಗಳ ಅಳವಡಿಕೆ ಹಿನ್ನಲೆ ಎರಡನೇ(ಬೇಸಿಗೆ) ಬೆಳೆಗೆ ನೀರು ಹರಿಸದಂತೆ ಡಿಬಿ ಬೋರ್ಡ್ ನಿರ್ಧರಿಸಿತ್ತು. ಅದರಂತೆಯೇ ಎರಡನೇ ಬೆಳೆಯಿಂದ ರೈತರು ದೂರು ಉಳಿದಿದ್ದರು. ಈಗ ಮುಂಗಾರು ಹಂಗಾಮಿ ಚಿಗುರು ಕಾಣುತ್ತಿರುವ ನಡುವೆ ಇಲ್ಲಿನ ಬುಕ್ಕಸಾಗರದ ತುರ್ತು ಕಾಲುವೆಗೆ ನೀರಿಲ್ಲದಂತಾಗುವ ಆತಂಕ ಮನೆ ಮಾಡಿದೆ. ಇಲ್ಲಿನ ಕಾಲುವೆಯಲ್ಲಿ ಮೇಲ್ಭಾಗದಿಂದ ಕೆಳ ಹಂತದವರೆಗೆ ಗಿಡ ಕಂಟಿಗಳು ಬೆಳೆದು ನಿಂತಿದ್ದು, ಮತ್ತು ಹೂಳಿನಿಂದ ತುಂಬಿಕೊಂಡಿದ್ದು, ಎಲ್ಲಿದೇ ಕಾಲುವೆ ಎಂದು ಹುಡುಕಾಡಬೇಕಾಗಿದೆ. ಇಲ್ಲಿನ ತುರ್ತು ಕಾಲುವೆಗೆ ಹರಿಸುವ ಎರಡು ಗೇಟ್ಗಳು ಸಂಪೂರ್ಣವಾಗಿ ದುರಸ್ಥಿಗೊಳಪಟ್ಟಿವೆ. ಮತ್ತು ಗೇಟ್ಗಳು ಸಂಪೂರ್ಣವಾಗಿ ತುಕ್ಕು ಹಿಡಿದು ಜಾಮ್ ಆಗಿ ಬಿಟ್ಟಿದ್ದು. ಗೇಟ್ ನಿರ್ವಹಣೆ ಭಾಗ್ಯ ಇಲ್ಲದಂತಾಗಿದೆ. ಇದರಿಂದ ರೈತರಿಗೆ ನೀರಿನ ಅಭಾವ ತಲೆ ದೋರುವಂತಾಗಿದೆ. ಇಲ್ಲಿನ ಭಾಗದಲ್ಲಿ ಅತಿ ಹೆಚ್ಚಾಗಿ ಬಾಳೆ, ಕಬ್ಬು, ಭತ್ತ ಬೆಳೆಯುವದುಂಟು. ಭತ್ತಕ್ಕೆ ನಿರಂತರವಾಗಿ ನೀರು ಹರಿಸಲೇಬೇಕು. ಉಳಿದ ಬೆಳೆಗಳಿಗೆ ಆಗೊಮ್ಮೆ ಈಗೊಮ್ಮೆ ನೀರಿನ ಅವಶ್ಯಕತೆ ಇದೆ. ಸಂಬಂಧಿಸಿದ ಕಮಲಾಪುರ ನೀರಾವರಿ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿಗೆ ರೈತರು ಸಂಕಷ್ಟ ಅನುಭವಿಸುವಂತಾಗಿದೆ. ಆದ್ದರಿಂದ ಇಲ್ಲಿನ ತುರ್ತು ಕಾಲುವೆಗೆ ಕಾಯಕಲ್ಪ ನೀಡಬೇಕಾಗಿದೆ.

**ಕೋಟ್ – ತುರ್ತು ಕಾಲುವೆಗೆ ನೀರಿಲ್ಲದೇ, ರೈತರಿಗೆ ತುಂಬ ಸಮಸ್ಯೆಯಾಗಿದೆ. ನಾಲ್ಕು ಗೇಟ್ ಗಳು ತುಕ್ಕು ಹಿಡಿದು ಹಾಳಾಗಿದ್ದು, ಹೊಸ ಗೇಟ್ ಅಳವಡಿಕೆಗೆ ನೀರಾವರಿ ಇಲಾಖೆ ಮುಂದಾಗುತ್ತಿಲ್ಲ. ಇಲ್ಲಿನ ನಾಲೆಯಲ್ಲಿ ಜಲಸಸ್ಯ, ಹೂಳು ತುಂಬಿಕೊಂಡು ನೀರು ಹರಿಯುತ್ತಿಲ್ಲ. ರೈತ ನೂರ್ ಅಹ್ಮದ್ ಅವರ ತೋಟದಲ್ಲಿ ನೀರು ನಿಂತ ಪರಿಣಾಮ ಕಾಲುವೆ ಮೇಲ್ಭಾಗದಲ್ಲಿ ನೀರು ಹರಿಯುವಂತಾಗಿದೆ. ಕೆಲವೊಂದು ಕಡೆಯಲ್ಲಿ ಕಾಮಗಾರಿ ಮಾಡಿ ಕೈತೊಳೆದುಕೊಳ್ಳಲಾಗಿದೆ. ಇಲ್ಲಿನ ನೀರಾವರಿ ಅಧಿಕಾರಿಗಳ ಬೇಜವಾಬ್ದಾರಿಗೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೂಡಲೇ ಅಧಿಕಾರಿಗಳು ಎಚ್ಚೆತ್ತು ತುರ್ತು ಕಾಲುವೆಗೆ ಕಾಯಕಲ್ಪ ನೀಡಬೇಕು. ಇಲ್ಲದಿದ್ದರೆ ಹೋರಾಟ ಶತಸಿದ್ಧ.**